ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 37 | ಸೆಪ್ಟಂಬರ್ 11, 1983 | ಬೆಲೆ 60 ಪೈಸೆ

ಸಮಗ್ರವಾಗಿ ಕಾರ್ಮಿಕ ನೀತಿಯನ್ನು ರೂಪೀಕರಿಸಬೇಕು

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ವಿಧಾನ ಸಭಾ ಗುಂಪಿನ ಪರವಾಗಿ ರಾಜ್ಯದ ಸಿಐಟಿಯು ಅಧ್ಯಕ್ಷರಾದ ಕಾ॥ ಎಸ್. ಸೂರ್ಯನಾರಾಯಣ ರಾವ್ ವಿಧಾನಸಭೆಯಲ್ಲಿ ಸೆಪ್ಟಂಬರ್ 6 ರಂದು ಅಂಕೆ ಸಂಖ್ಯೆಗಳು ಮತ್ತು ರಾಜ್ಯಾದ್ಯಂತ ಕಾರ್ಮಿಕರ ನಿತ್ಯ ಅನುಭವದ ಆಧಾರದಲ್ಲಿ ಸ್ಪಷ್ಟೀಕರಿಸಿದರು. "ಕಾಂಗ್ರೆಸ್ಸು ಸರ್ಕಾರದ ಕಾರ್ಮಿಕ ನೀತಿಯನ್ನು ಬದಲಾಯಿಸುವ ಬಗ್ಗೆ ಜನತಾ ಸರ್ಕಾರವು ಗಮನ ಹರಿಸಬೇಕು" ಎಂದರು

ಭಾಷಣದ ಮುಖ್ಯ ಅಂಶಗಳು ಹೀಗಿವೆ.

"ಲಕ್ಷಾಂತರ ಕಾರ್ಮಿಕರಿಗೆ ತಿಂಗಳೊಂದರ ಕೋಟ್ಯಾಂತರ ರೂಪಾಯಿನ ನಷ್ಟವನ್ನುಂಟು ಮಾಡುವ ಜೀವನ ಸೂಚ್ಯಾಂಕ ತಯಾರಿ ಮತ್ತು ಪ್ರಕಟನೆಯಲ್ಲಿರುವ 'ಮೋಸ'ವನ್ನು ತೆಗೆದುಹಾಕಲು ಕ್ರಮಗಳನ್ನು ರಾಜ್ಯ ಸಗಕಾರವು ಕೈಗೊಳ್ಳಬೇಕು. ಈ ಕುರಿತು ಒಂದು ಅಧ್ಯಯನ ಸಮಿತಿಯನ್ನು ಕೂಡಲೇ ರಚಿಸಬೇಕು.

ಅಂತರ್‌ರಾಷ್ಟ್ರೀಯ ಹಣಕಾಸಿನ ಸಂಸ್ಥೆಯ ಜತೆ ಭಾರತ ಸರಕಾರವು ಒಪ್ಪಂದ ಮಾಡಿಕೊಂಡ ಪರಿಣಾಮವಾಗಿ ಕಾರ್ಮಿಕರ ಹೋರಾಟದ ಶಕ್ತಿಯನ್ನು ಮೊಟಕು ಮಾಡಿ ಅವರ ಸಾಮೂಹಿಕ ಚೌಕಾಶೀ ಶಕ್ತಿಯನ್ನು ಮುರಿಯುವ ಹಂಚಿಕೆಯಿಂದ ಕೇಂದ್ರ ಸರಕಾರವು ಹಲವು ಕಾರ್ಮಿಕ ವಿರೋಧಿ ಕಾನೂನುಗಳನ್ನು ಮುಂದಿಟ್ಟಿದೆ. ದೇಶದ ಬಹುಭಾಗದ ಕಾರ್ಮಿಕರು ವಿರೋಧಿಸಿದ ಈ ಕಾನೂನುಗಳು ಕರ್ನಾಟಕದಲ್ಲಿ ಜಾರಿ ಮಾಡುವುದಿಲ್ಲವೆಂದು ರಾಜ್ಯದ ಜನತಾ ಸರಕಾರವು ಕಾರ್ಮಿಕರಿಗೆ ಆಶ್ವಾಸನೆ ಕೊಡಬೇಕು.

"ರಾಜ್ಯದ ಮುಖ್ಯ ಮಂತ್ರಿಗಳು ವಿಧಾನಸಭೆಯಲ್ಲಿ ಆಶ್ವಾಸನೆ ಕೊಟ್ಟ" ಕಾರ್ಮಿಕ-ಮಾಲಿಕ ವಿವಾದಗಳಲ್ಲಿ ಪೋಲೀಸರ ಪ್ರವೇಶ ಮಾಡಲು ಬಿಡುವುದಿಲ್ಲ ಎಂಬ ನೀತಿ ಯಥಾರ್ಥವಾಗಿ ಜಾರಿಯಲ್ಲಿಲ್ಲ. ಮುಷ್ಕರ ಮಾಡಲು ನೋಟೀಸು ಕೊಟ್ಟ ದಿನದಿಂದಲೇ ಹಲವು ಪೋಲೀಸು ವ್ಯಾನುಗಳು ಫ್ಯಾಕ್ಟರಿಗೇಟುಗಳ ಮುಂದುಗಡೆ ಬಂದು ನಿಲ್ಲುತ್ತವೆ. ಮಾಲೀಕರ ಎಲ್ಲ ಆಜ್ಞೆಗಳನ್ನು ಪರಿಪಾಲಿಸುವ ಮೂಲಕ ಕಾರ್ಮಿಕರ ನ್ಯಾಯವು ಸಂಪೂರ್ಣವಾಗಿ ಧೂಳೀಪಟವಾಗುವ ಪರಿಸ್ಥಿತಿಯನ್ನು ಈ ಪೋಲೀಸರ ಮಧ್ಯ ಪ್ರವೇಶ ತರುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳ ಆಶ್ವಾಸನೆ ಕಟ್ಟುನಿಟ್ಟಾಗಿ ಜಾರಿಯಾಗುವಂತೆ ಕ್ರಮ ವಹಿಸಬೇಕು.

"ಆಧುನೀಕರಣದ ಹೆಸರಿನಲ್ಲಿ ಹೊಸ ಉದ್ಯೋಗಾವಕಾಶವು ನಿಷೇಧಿಸಲ್ಪಡುತ್ತಿದೆ ಮಾತ್ರವಲ್ಲ ಇದ್ದ ಉದ್ಯೋಗಕ್ಕೂ ಧಕ್ಕೆ ಬರುವ ಸ್ಥಿತಿ ಉಂಟಾಗುತ್ತಿದೆ. ನಿರುದ್ಯೋಗವು ಈಗಾಗಲೇ ಬೃಹದಾಕಾರವಾಗಿ ಬೆಳೆದಿರುವಾಗ, ಈ ಆಧುನೀಕರಣವನ್ನು ಸರಕಾರವು ಹದ್ದಿನಲ್ಲಿ ಇರಿಸಲು ಕ್ರಮವಹಿಸಬೇಕು"

"ಕನ್ಸಿಲಿಯೇಶನಿನಿಂದ ಹಿಡಿದು ಹೈಕೋರ್ಟಿನವರೆಗೆ ಹತ್ತು-ಸಹಸ್ರ ಸಂಖ್ಯೆಯಲ್ಲಿ ಕಾರ್ಮಿಕರ ವಿವಾದಗಳು ವರ್ಷಗಟ್ಟಲೆಯಲ್ಲಿ ಮುಂದೂಡಲ್ಪಟ್ಟು ಧೂಳು ತಿನ್ನುತ್ತಿವೆ. ಕಾರ್ಮಿಕ ಕುಟುಂಬಗಳನ್ನು ಅಮಾನುಷವಾಗಿ ಕಾಡುತ್ತಿವೆ. ಈ ಬಗ್ಗೆ ಸರಕಾರವು ತೀವ್ರ ಕ್ರಮಗಳನ್ನು ಕೈಗೊಂಡು ಈ ನಿಟ್ಟಿನಲ್ಲಿ ಬದಲಾವಣೆಯನ್ನುಂಟು ಮಾಡಬೇಕು."

ಕನ್ಸಿಲಿಯೇಸನ್ ಮೆಶಿನರಿಗೆ ಸಹಕಾರ ಕೊಡದೆ ಧಿಕ್ಕರಿಸಿ ನಡೆಯುವ ಎಲ್ಲಾ ಖಾಸಗಿ ಮಾಲಿಕರಿಗೆ ಯಾವುದೇ ರೀತಿಯ ರಕ್ಷಣೆಯನ್ನು ಕೊಡಲು ಸರಕಾರವು ನಿರಾಕರಿಸಬೇಕು. ಆ ಮೂಲಕ ಆ ಮಾಲಿಕರು ಕನ್ಸಿಲಿಯೇಶನಿಗೆ ಬರುವಂತೆ ನಿರ್ಬಂಧಿತರಾಗುತ್ತಾರೆ. ಈದಿಸೆಯಲ್ಲಿ ಕಾರ್ಮಿಕವಿವಾದ ಕಾಯಿದೆ ಬದಲಾಯಿಸಲು ಕ್ರಮ ತೆಗೆದುಕೊಳ್ಳಬೇಕು.

"27 ಕೈಗಾರಿಕೆಗಳಲ್ಲಿ ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಹಿಂದಿನ ಸರ್ಕಾರವು ತೀರ್ಮಾನಿಸಿದ್ದು ಹೈಕೋರ್ಟಿನಿಂದ ತಡೆಹಿಡಿದದ್ದರ, ಪರಿಣಾಮವಾಗಿ ಈಗ ಈ ಕಾರ್ಮಿಕರ ಸ್ಥಿತಿ 'ತ್ರಿಶಂಕು'ವಿನಂತಾಗಿದೆ. 8 ತಿಂಗಳು ಉಳಿದರೂ ಈ ತನಕ ಈ ಕುರಿತು ಸರಕಾರವು ಮುಂದುವರಿದು ಈ ಲಕ್ಷಾಂತರ ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಮಾಡದಿದ್ದುದು ವಿಷಾದಕರ–ಇನ್ನಾದರೂ ಈ ಬಗ್ಗೆ ಜಾಗ್ರುತೆಯಾಗಿ ಕ್ರಮವಹಿಸಬೇಕು.

"ಇ. ಎಸ್. ಐ., ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಇತ್ಯಾದಿಹಲವು ವಿಭಾಗಗಳ ಕೆಲಸ ಕಾರ್ಯಗಳಿಂದ ಕಾರ್ಮಿಕರಿಗೆ ಇಂದು ಹಲವೆಡೆ ಏನೂ ಸಹಾಯವಾಗುತ್ತಿಲ್ಲ. ಈ ಕುರಿತು ಸರಕಾರವು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಬೇಕು.

"ಮಾಲಿಕರಿಗೆ ವಿನಾಕಾರಣ ಅಮಾನತು, ಡಿಸ್‌ಮಿಸ್ಸಲ್ ಇತ್ಯಾದಿ ಕ್ರಮಗಳಿಗೆ ಒಳಗಾದ ಕಾರ್ಮಿರಿಗೆ ವಿವಾದಗಳು ಇತ್ಯರ್ಥವಾಗುವ ತನಕ 'ಸಂಬಳ' ಸಿಗುವಂತೆ ಕಾನೂನು ತಿದ್ದುಪಡಿ ತರಬೇಕು. ಕ್ಷುಲ್ಲಕ ಕಾರಣಗಳಿಗಾಗಿ ಕೆಲಸಗಾರರನ್ನು ಕೆಲಸದಿಂದ ವಜಾ ಮಾಡುವ ಮಾಲಕರ ನೀತಿಗೆ ಪೂರ್ಣ ವಿರಾಮ ಹಾಕಲು ಜನತಾ ಸರಕಾರ ಮುಂದಾಗಬೇಕು.

"ಒಟ್ಟಿನಲ್ಲಿ ಜನತಾ ಸರಕಾರವು ಅಧಿಕಾರಕ್ಕೆ ಬರಲು ಅಹೋರಾತ್ರಿ ದುಡಿದ ಕಾರ್ಮಿಕ ವರ್ಗದ ಸಮಸ್ಯೆಗಳಬಗ್ಗೆ ಜಾಗ್ರುತೆಯಾಗಿ ಜನತಾ ಸರ್ಕಾರವು ಗಮನಕೊಟ್ಟು ಅವುಗಳ ತೀವ್ರ ಪರಿಹಾರಕ್ಕೆ ಮುಂದಾಗಬೇಕು" ಎಂದು ಎಸ್. ಸೂರ್ಯನಾರಾಯಣರಾವ್ ಅಭಿಪ್ರಾಯಕೊಟ್ಟರು.

ಸಂಪಾದಕೀಯ

ಯಾರಿಗಾಗಿ ಈ ಮಾತು

ಚುನಾಯಿತ ಸರಕಾರಗಳನ್ನು ಉರುಳಿಸಲು ರಾಜಕೀಯ ಪಕ್ಷಗಳು ವ್ಯರ್ಥವಾಗಿ ತಮ್ಮ ಶ್ರಮ-ಸಮಯ ಹಾಳು ಮಾಡಬಾರದೆಂದು ರಾಷ್ಟ್ರಾಧ್ಯಕ್ಷರಾದ ಜೇಲ್‌ಸಿಂಗ್ ಅವರು ಬೆಂಗಳೂರಿನಲ್ಲಿ ಭಾಷಣ ಮಾಡುತ್ತ ಬುದ್ಧಿ ವಾದದ ಮಾತು ಹೇಳಿದ್ದಾರೆ. ಇಷ್ಟರಿಂದಲೇ ತೃಪ್ತಿಗೊಳ್ಳದ ಜೇಲ್‌ಸಿಂಗರು "ಸರಕಾರಗಳನ್ನು ಉರುಳಿಸಲಿಕ್ಕೆ ನೀವು ಹೆಚ್ಚು ಗಮನ ನೀಡಿದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ನಿಮಗೆ ಸಮಯವೇ ಸಿಗಲಾರದು" ಎಂದೂ ಹಿರಿತನದ ನುಡಿ ಸುರಿಸಿದ್ದಾರೆ,

ಜೈಲಸಿಂಗರ ಈ ಅಮೃತವಾಣಿ ಯಾರ ಸಲುವಾಗಿ ? ತನ್ನನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಿದ ಇಂದಿರಾಗಾಂಧಿಯವರ ಸಲುವಾಗಿಯೋ ಅಥವಾ ಕರ್ನಾಟಕದ ಕಾಂಗ್ರೈ ಮುಖಂಡರುಗಳಾದ ಕೆ. ಎಚ್ ಪಾಟೀಲ, ಮೊಯಿಲಿಗಳ ಸಲುವಾಗಿಯೋ? ಕರ್ನಾಟಕದಲ್ಲಿ ಜನತಾ ಸರಕಾರವಿದ್ದು, ಬೆಂಗಳೂರು ನಗರ ಕಾರ್ಪೊರೇಶನಿನಲ್ಲಿ ಜನತಾ ಪಕ್ಷವೇ ಬಹುಮತ ಪಡೆದು ಆ ಪಕ್ಷವೇ ಜೈಲಸಿಂಗರಿಗೆ ಪೌರ ಸನ್ಮಾನ ನೀಡಿರುವ ಆ ಸಂದರ್ಭದಲ್ಲಿ ಇಂಥ ಮಾತಿನ ಅರ್ಥವೇನು ?

ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗೈ ಪಕ್ಷಕ್ಕೆ ಬೇಡವಾದ ಕೇರಳದ ಕಮ್ಯುನಿಸ್ಟ್ ಪಾರ್ಟಿ ಸರಕಾರವನ್ನು 1959ರಲ್ಲೂ, ಅನಂತರ ಪಶ್ಚಿಮ ಬಂಗಾಲ, ಗುಜರಾತ್, ಹಾಗೆಯೇ ಇತರ ರಾಜ್ಯಗಳಲ್ಲಿದ್ದ ವಿರೋಧ ಪಕ್ಷಗಳ ಸರಕಾರಗಳನ್ನು ಉರುಳಿಸುತ್ತ ಬಂದವರು ಇಂದಿರಾ ಗಾಂಧಿ. ಹರಿಯಾಣದಲ್ಲಿ ತನ್ನ ಪಕ್ಷಕ್ಕೆ ಬಹುಮತವಿಲ್ಲದಿದ್ದರೂ, ಶಾಸಕರನ್ನು ಕೊಂಡು ಕೊಂಡು ಪಕ್ಷ ಸರಕಾರ ರಚಿಸಿದವರು ಇಂದಿರಾ ಗಾಂಧಿ. ಚರಣಸಿಂಗರಿಗೆ ಪ್ರಧಾನ ಮಂತ್ರಿ ಪದವಿ ಆಮಿಷ ತೋರಿಸಿ, 1979ರಲ್ಲಿ ಕೇಂದ್ರದ ಜನತಾ ಸರಕಾರ ಉರುಳಿಸಿದವರು ಇಂದಿರಾ ಗಾಂಧಿ. ಚುನಾಯಿತ ಸರಕಾರಗಳನ್ನು ಉರುಳಿಸುವುದರಲ್ಲಿ ಪ್ರಾವೀಣ್ಯತೆ ಪಡೆದವರು ಜೈಲಸಿಂಗರ ಗುರುಗಳಾಗಿರುವ ಇಂದಿರಾ ಗಾಂಧಿಯಲ್ಲವೇ ? ಪಶ್ಚಿಮ ಬಂಗಾಲದ, ಕರ್ನಾಟಕದ ಸರಕಾರಗಳನ್ನು ಉರುಳಿಸಲು ಈಗಲೂ ಸಂಚು ನಡೆಯುತ್ತಿಲ್ಲವೇ ? ಜೈಲಸಿಂಗರು ಈ ಮಾತುಗಳನ್ನು ಇಂದಿರಾ ಗಾಂಧಿಗೆ ನೇರವಾಗಿ ಹೇಳಿದ್ದರೆ ಹೆಚ್ಚು ಉಪಕಾರವಾಗುತ್ತಿತ್ತಲ್ಲವೇ ? ರಾಷ್ಟ್ರದಲ್ಲಿ ಹಬ್ಬಿರುವ ಬಡತನವನ್ನು ಬಣ್ಣಿಸುತ್ತಾ, ನೂರಾರು ಎಕರೆ ಪ್ರದೇಶವನ್ನು ಆವರಿಸಿರುವ ಅತಿ ಭವ್ಯ-ವಿಶಾಲವಾದ ರಾಷ್ಟ್ರಪತಿ ಭವನವನ್ನು ಬಿಟ್ಟು ಕೊಟ್ಟು ಸಣ್ಣ ಕಟ್ಟಡಕ್ಕೆ ವರ್ಗಾಯಿಸಿಕೊಳ್ಳುತ್ತೇನೆಂದು ಹೇಳುತ್ತಿದ್ದಂತೆಯೇ ಸಂಜೀವರೆಡ್ಡಿಯವರು ವಿಶೇಷ ರೈಲಿನಲ್ಲಿ ತಮ್ಮೂರಿಗೆ ಪ್ರಯಾಣ ಮಾಡಿ ಬಡತನದ ಬೇಗೆ ಪರಿಹರಿಸಿದ್ದನ್ನು ನೋಡಿದ್ದೇವೆ.

ಈಗ ಜೈಲಸಿಂಗ್ ಮಹಾಶಯರು ಸರಕಾರಗಳ ಉರುಳುವಿಕೆ, ಜಾತಿ, ಧರ್ಮಗಳ ದುರುಪಯೋಗದ ಕುರಿತು ಪುರಾಣ ಬಿಚ್ಚುತ್ತಿದ್ದಾರೆ. ಇದರಲ್ಲೆಲ್ಲ ಇವರೂ ಪಾಲುಗಾರರೆಂಬುದನ್ನು ಅವರು ಮರೆತಿರಬೇಕಷ್ಟೆ ಆದರೆ ಜನ ಮರೆತಿಲ್ಲ.

ನಮ್ಮ ಸಂವಿಧಾನದಲ್ಲಿ ಮಂತ್ರಿ ಮಂಡಲ, ಪ್ರಧಾನ ಮಂತ್ರಿ ಪದವಿಯೇ ಪ್ರಾಧಾನ್ಯವಾಗಿ, ರಾಷ್ಟ್ರಪತಿ ಹುದ್ದೆ ಅಲಂಕಾರಿಕವಾಗಿಯಷ್ಟೇ ಇರುವುದರಿಂದಲೇ ಸಂಜೀವರೆಡ್ಡಿ, ಜೈಲಸಿಂಗರಂಥವರು ತಮಗೆ ಸಂಬಂಧವಿಲ್ಲದಂತ ಮಾತುಗಳನ್ನಾಡಿ ಸಂತೃಪ್ತಿಗೊಳ್ಳುತ್ತಿದ್ದಾರೆ. ಪೌರ ಸನ್ಮಾನದ ಸಂದರ್ಭದಲ್ಲಿ ಸರಕಾರ ಉರುಳುವಿಕೆಯ ನುಡಿಗಳನ್ನಾಡಿದುದೇಕೆ ? ಅದು ಅಸಂಬದ್ಧ ವಲ್ಲವೇ ?

ಕಾಂಗ್ರೆಸ್ಸಿನೊಳಗೆ ಬಂಡಾಯ

ಚುನಾಯಿತ ಸರಕಾರಗಳನ್ನು ಉರುಳಿಸಬಾರದೆಂದು ರಾಷ್ಟ್ರಪಿತ ಜೈಲಸಿಂಗರು ಬುದ್ಧಿ ವಾದದ ಮಾತುಗಳನ್ನಾಡುತ್ತಿದ್ದಂತೆಯೇ ಈ ಮಹಾಶಯನನ್ನು ರಾಷ್ಟ್ರದ ಪ್ರಥಮ ಸ್ಥಾನಕ್ಕೇರಿಸಿದ ಇಂದಿರಾ ಗಾಂಧಿ ಚುನಾಯಿಸಲ್ಪಟ್ಟ ವಿರೋಧ ಪಕ್ಷಗಳ ಸರಕಾರಗಳನ್ನುರುಳಿಸುವುದರಲ್ಲಿ ವಿಫಲವಾದರೂ ಕೂಡ, ತನ್ನದೇ ಪಕ್ಷದ ಸರಕಾರಗಳ ಮುಖ್ಯಮಂತ್ರಿಗಳನ್ನು ತನ್ನ ಪಕ್ಷದ ಪ್ರಾಂತ ಮುಖಂಡರನ್ನು ಸ್ಥಾನ ಪಲ್ಲಟಗೊಳಿಸುವುದರಲ್ಲಿಯ "ತಲ್ಲೀನತೆ" ಯನ್ನು ಬಿಟ್ಟು ಕೊಟ್ಟಿಲ್ಲ. ಈ ಹಿಂದೆ ದಿಲ್ಲಿಯ "ಫರ್ಮಾನನ್ನು" ವಿರೋಧಿಸುವ ಧೈರ್ಯ ರಾಜ್ಯ ಮುಖಂಡರಿಗೆ ಇದ್ದಿಲ್ಲ. ಆದರೆ ಈಗ ರಾಜ್ಯಗಳ ಜನಾಭಿಪ್ರಾಯದ, ಶಾಸಕರ ಬಹುಮತದ ವಿರುದ್ಧವಾಗಿ ನೀಡುವ ಇಂದಿರಾಗಾಂಧಿಯವರ ಆದೇಶವನ್ನು ಒಪ್ಪಿಕೊಳ್ಳುವ ಸೌಹಾರ್ದತೆಯನ್ನು ಆಕೆಯ ಕಿರಿ ಚೇಲಾಗಳು ತೋರಿಸುತ್ತಿಲ್ಲ. ರಾಜ್ಯಗಳ ಮೇಲೆ ಇಂದಿರಾ ಹಿಡಿತ ಸಡಿಲಗೊಳ್ಳುತ್ತಿದೆ.

ಕರ್ನಾಟಕದಲ್ಲಿ ಕಾಂಗ್ರೈಯ ರಾಜ್ಯ ಸಮಿತಿಯನ್ನು ಪುನರ್ರಚಿಸಿದಾಗ ಯಾವ ಪ್ರತಿಭಟನೆಯನ್ನು ಎದುರಿಸದ ದಿಲ್ಲಿ ರಾಣಿಗೆ ಆಂಧ್ರ-ಕೇರಳಗಳಲ್ಲಿ

(8ನೇ ಪುಟ ನೋಡಿ)

ಇಂದಿರಾಗಾಂಧಿಯ ಹೊಸ ಭೂ ಬಾಣ

-ಎನ್. ಕೆ. ಉಪಾಧ್ಯಾಯ

1969ರ "ಗರೀಬಿ ಹಟಾವೋ" 1974-75ರ 20 ಅಂಶ 2.5 ಅಂಶಗಳ ಕಾರ್ಯಕ್ರಮಗಳಾಗಲೀ ಜನರ ಮೇಲೆ ಪರಿಣಾಮ ಬೀರದಿರುವುದನ್ನು ಕಂಡ ಇಂದಿರಾ ಗಾಂಧಿ ಮುಂಬರುವ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮತದಾರರನ್ನು ಆಕರ್ಷಿಸುವ ಸಲುವಾಗಿ ಸಕ್ಕರೆ ಲೇಪಿತ ಹೊಸ ಭೂ ಭಾಣವನ್ನು ಜನರೆಡೆ ಎಸೆದಿದ್ದಾರೆ. ಆಗಸ್ಟ್ 15 ರಂದು ಕೆಂಪು ಕೋಟೆಯಲ್ಲಿ ಭಾಷಣ ಮಾಡುತ್ತ ನಿರುದ್ಯೋಗ ನಿವಾರಣೆಯ ಸಲುವಾಗಿ ಎರಡು ಯೋಜನೆಗಳನ್ನು ಘೋಷಿಸಿದ್ದಾರೆ. ಈ ಹಿಂದಿನ ಘೋಷಣೆಗಳಿಗೆ ಬೇಸತ್ತ ಜನರು ಹೊಸ ಘೋಷಣೆಗೆ ಮನಸೋಲಬಹುದೆಂಬ ಅಪೇಕ್ಷೆ ಇಂದಿರಾಗಾಂಧಿಯ ವಗದ್ದಾಗಿದೆ. ಚುನಾವಣೆಗೆ ಕೆಲವೇ ತಿಂಗಳಿರುವಾಗಲೇ ಇಂಥ ಘೋಷಣೆಗಳನ್ನು ಹೊರಡಿಸಲಾಗುತ್ತಿದೆಂಬುದನ್ನು ಕಂಡಿದ್ದೇವೆ. ಹೊಸ ಘೋಷಣೆಗಳಿಗೆ ಆಕರ್ಷಿಸಲ್ಪಟ್ಟ ಜನತೆ ಚುನಾವಣೆಯಲ್ಲಿ ಮತ ನೀಡುತ್ತಾರೆ. ಆರಿಸಿ ಬರಲು ಅನುಕೂಲವಾಗುತ್ತದೆ. ಚುನಾವಣೆಯ ನಂತರ ಕೆಲವು ತಿಂಗಳು ಅವಿಷೆ ತೋರಿಸುತ್ತಾ ಹೋಗಬಹುದು. ಅನಂತರ ಜನ ಎಲ್ಲವನ್ನು ಮರೆಯುತ್ತಾರೆ. ಮುಂದಿನ ಮಾತು ಮುಂದೆ. ಇದು ಇಂದಿರಾ ಗಾಂಧಿಯ ಅನಿಸಿಕೆ. ಒಂದು ವರ್ಷ ಮುಂಚಿತವಾಗಿಯೇ ಅಂದರೆ 1984 ರಲ್ಲೇ ಲೋಕಸಭೆ ಚುನಾವಣೆ ನಡೆಸುವ ವಿಚಾರ ಇಂದಿರಾಗಾಂಧಿಗೆ ಇದ್ದಂತೆ ಕಂಡು ಬರುತ್ತದೆಂದು ಹಲವರ ಅಭಿಪ್ರಾಯ. ಉದ್ಯೋಗ ಸಮಸ್ಯೆಗೆ ಮುಂದೆ ಮಾಡಿರುವ ಡೋಂಗಿ ಸೂತ್ರ, ಮತದಾರರ ಯಾದಿಯ ಪರಿಷ್ಕರಣಗಳಂಥ ಚಟುವಟಿಕೆ ಈ ಅಭಿಪ್ರಾಯಗಳನ್ನು ಪುಷ್ಟೀಕರಿಸುತ್ತಿವೆ.

ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಭೂ ರಹಿತ ಕುಟುಂಬಕ್ಕೆ ಉದ್ಯೋಗ ಮತ್ತು ನಗರ ಪ್ರದೇಶದಲ್ಲಿ ನಿರುದ್ಯೋಗಿ ವಿದ್ಯಾವಂತರಿಗೆ ಸ್ವಯಂ ಉದ್ಯೋಗ. ಇಂದಿರಾ ಅವರ ಎರಡು ಗುಳಿಗೆಗಳು ಇವೇ.. ದೇಶದಲ್ಲಿ ನಿರುದ್ಯೋಗ ತಾಂಡವವಾಡುತ್ತಿರುವಾಗ ಬಡಜನರನ್ನು ಈ ಘೋಷಣೆಗಳಿಂದ ಆಕರ್ಷಿಸಬಹುದೆಂದು ಇಂದಿರಾಗಾಂಧಿಯವರ ಅಭಿಲಾಷೆ.

ಈ ಎರಡು ಘೋಷಣೆಗಳ ವಿವರಗಳನ್ನು 18ರಂದು ಲೋಕಸಭೆಯಲ್ಲಿ ವಿವರಿಸಲಾಯಿತು. ಗ್ರಾಮಾಂತರ ಅಭಿವೃದ್ಧಿ ಮಂತ್ರಿ ಹರಿನಾತ ಮಿಶ್ರಾ ಅವರು ಲೋಕಸಭೆಯಲ್ಲಿ ವಿವರಣೆ ಕೊಡುತ್ತಾ ಪ್ರತಿ ವರ್ಷ ಪ್ರತಿ ಒಂದು ಭೂಹೀನ ಕುಟುಂಬದಲ್ಲಿ ಒಬ್ಬನಿಗೆ ಕನಿಷ್ಟ 100 ದಿವಸ ಉದ್ಯೋಗ ಭದ್ರತೆಯ ಅವಕಾಶವನ್ನೊದಗಿಸುವ ಈ ಯೋಜನೆ "ಅತಿ ಮುಖ್ಯವೈಲುಗಲ್ಲಾಗಲಿದೆ" ಎಂದು ಹೇಳಿದ್ದಾರೆ. ಈ ಕಾರ್ಯಕ್ರಮದ ಪ್ರಕಾರ 1983-84 ರಲ್ಲಿ 600 ಲಕ್ಷ ಹೆಚ್ಚಿನ ಉದ್ಯೋಗದ ದಿನಗಳನ್ನು 1984-85 ರಲ್ಲಿ 3000 ಲಕ್ಷ ಉದ್ಯೋಗದ ದಿನಗಳನ್ನು ಹುಟ್ಟಿಸಲಿದೆ.

"ಗ್ರಾಮಾಂತರ ಪ್ರದೇಶದ ಭೂಹೀನರಿಗೆ ಉದ್ಯೋಗ ಗ್ಯಾರಂಟಿ ಕಾರ್ಯಕ್ರಮ"ವಾದ ಈ ಯೋಜನೆಗೆ ಈ ವರ್ಷ 100 ಕೋಟಿ, ಮುಂದಿನ ವರ್ಷ ರೂ. 500 ಕೋಟಿ ತೆಗೆದಿಡಲಾಗಿದೆ. ರಾಜ್ಯಗಳಿಗೆ ನೂರಕ್ಕೆ ನೂರರಷ್ಟು ಸಹಾಯ ನೀಡಲಾಗುವುದಂತೆ. ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮಕ್ಕನುಸಾರವಾಗಿ–ಅಂದರೆ ಪ್ರತಿಯೊಂದು ರಾಜ್ಯಗಳಲ್ಲಿರುವ ಕೃಷಿ ಕಾರ್ಮಿಕರ ಮತ್ತು ಅಲ್ಪ ವ್ಯವಸಾಯಗಾರರ ಒಟ್ಟು ಶೇ 75 ರಷ್ಟು ಮತ್ತು ಬಡತನಕ್ಕೆ ಶೇ 25 ರಷ್ಟು– ಧನ ಸಹಾಯ ನೀಡಲಾಗುವುದು.

ರಾಜ್ಯ ಸರಕಾರಗಳು ತಯಾರಿಸುವ ಯೊಜನೆಗಳಿಗೆ ಕೇಂದ್ರ ಕಮಿಟಿ ಸಮ್ಮತಿ ಕೊಟ್ಟ ನಂತರ ಹಣ ಬಿಡುಗಡೆ ಮಾಡಲಾಗುವುದಂತೆ. ರಸ್ತೆ ರಚನೆ, ಹೊಲಗಳಲ್ಲಿ ಕಾಲುವೆ ತೋಡುವುದು, ಭೂಮಿ ಅಭಿವೃದ್ಧಿಗೊಳಿಸುವುದು, ಅರಣ್ಯ ಬೆಳೆಸುವುದು, ಮಣ್ಣು ಮತ್ತು ನೀರು ಶೇಖರಣೆಗಳಂತ ಕೆಲಸಗಳನ್ನು ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಅಂಶತಃ ಆಹಾರಧಾನ್ಯಗಳ ರೂಪದಲ್ಲಿ ಪಗಾರ ಕೊಡಲಾಗುವುದು.

ಇಂದಿರಾಗಾಂಧಿಯ ಈ ಘೋಷಣೆಗಳನ್ನೂ, ಯೋಜನೆಯ ವಿವರಣೆಗಳನ್ನು ನೋಡಿ ನಿರುದ್ಯೋಗಿಗಳಿಗೂ ಕಾಂಗ್ರೆ ಏಜಂಟರಿಗೂ ನಾಲಿಗೆಯಲ್ಲಿ ನೀರು ಸುರಿಯುತ್ತಿರಬೇಕು. ಮನೆಗೊಂದು ಕೆಲಸ, ಉದ್ಯೋಗಕ್ಕೆ ಬ್ಯಾಂಕು ಸಾಲ. ಮತ್ತೇನು ಬೇಕು— ಬಡವರಿಗೆ ಎಂದು ಹೇಳುವವರು ಬಹಳ ಜನ. ಜನರ ಇಂಥ ಮನೋಭಾವನೆಯನ್ನು ತಿಳಿದೇ ಇಂದಿರಾ ಗಾಂಧಿ ಶೀಘ್ರಲಿಪಿಯಂತೆ ಸುಲಭದ ದಾರಿಯನ್ನೆ ಹುಡುಕಿದ್ದಾರೆ. ಈ ಯೋಜನೆಯ ಪ್ರಚಾರ ಸಾಧನೆಯಾಗಿ ಕಮೀಶನ್ ಏಜೆಂಟರು ತುದಿ ಗಾಲಲ್ಲೇ ನಿಂತು ಗಂಟೆ ಬಾರಿಸುತ್ತಾರೆ. ಇಂದಿರಾ ಗಾಂಧಿ ಬಹಳ ಬುದ್ಧಿವಂತೆ ಎಂಬುದು ಯೋಜನೆಯ ವಿವರಣೆಯಿಂದಲೇ ತಿಳಿಯಬಹುದು. ಈ ವರ್ಷ ಮತ್ತು ಮುಂದಿನ ವರ್ಷ ಎಷ್ಟು ಖರ್ಚು ಮಾಡಲಾಗುವುದೆಂಬುದನ್ನಷ್ಟೇ ಪ್ರಕಟಿಸಿದ್ದಾರೆ. ಅನಂತರದ ಸ್ಥಿತಿಗತಿ ವಿವರಿಸುವಗೊಡವೆಗೆ ಹೋಗಲಿಲ್ಲ ಈ ಅಮ್ಮ. ಇದರರ್ಥವೇನೆಂದರೆ ಮುಂದಿನ ವರ್ಷವೇ ಚುನಾವಣೆ ಬರಬಹುದು ಅಥವಾ 1985 ರ ಚುನಾವಣೆಗೆ ಇದು ಒಳ್ಳೇ ಪ್ರಚಾರದ ಆಹಾರವಾಗಬಹುದು.

ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಮೂರು ಕೋಟಿಯನ್ನು ತಲ್ಪುತ್ತಿದೆ. ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳು ಎಷ್ಟೆಂಬುದನ್ನು ತಿಳಿಯುವುದೇ ಕಷ್ಟ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಅವರ ದಾಖಲಾತಿ ವಿರಳ. ದೇಶದ ಬಹು ಭಾಗ ಮಳೆಯನ್ನೇ ಅವಲಂಬಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕೂಲಿಗಾರರಿಗೆ, ಮಧ್ಯಮ, ಸಣ್ಣ ರೈತರಿಗೆ ವರ್ಷದಲ್ಲಿ ನೂರು ದಿವಸ ಕೆಲಸ ಸಿಗುವುದೂ ಕಷ್ಟ. ವರ್ಷದಲ್ಲಿ ಬಹುಭಾಗ ನಿರುದ್ಯೋಗಿಗಳಾಗಿಯೇ ಇರುವಂತೆ ಮಾಡಿದೆ ಈ ಬಂಡವಾಳಶಾಹಿ ಸರಕಾರ. ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಒಕ್ಕಲುತನ ಅಭಿವೃದ್ಧಿಯಾಗಲೀ, ನೀರಾವರಿಯ ವಿಸ್ತರಣೆಯಾಗಲೀ, ಒಕ್ಕಲತನಕ್ಕೆ ಸಂಬಂಧಪಟ್ಟ, ಅಥವಾ ಇತರ ಕೈಗಾರಿಕೆಗಳಾಗಲೀ ತಲೆ ಎತ್ತದಿರುವುದರಿಂದ ನಿರುದ್ಯೋಗಿಗಳ ಸಾಲಿಗೆ ಹೊಸ ಯುವಕರು ಸೇರಿಕೊಳ್ಳುತ್ತಿದ್ದಾರೆ. ಇದರ ಜೊತೆಯಲ್ಲಿ ಪಟ್ಟಣಗಳಲ್ಲಿ ಶಾಲೆ–ಕಾಲೇಜು ಪದವೀಧರರಾಗಿ ಉದ್ಯೋಗಾಕಾಂಕ್ಷಿಗಳಾಗಿ ತಿರುಗಾಡುತ್ತಿರುವ ಯುವಕರು ಬೇರೆ. ಒಕ್ಕಲತನ ಶಿಕ್ಷಣ ಪದ್ಧತಿಗಳೆರಡೂ ನಾವು ಸಾಧಿಸಿದ ಐದು ಪಂಚವಾರ್ಷಿಕ ಯೋಜನೆಗಳಲ್ಲೇ ಆಗಲಿ, ಆರನೇ ಪಂಚವಾರ್ಷಿಕ ಯೋಜನೆಯ ಮೂರು ವರ್ಷಗಳಲ್ಲೇ ಆಗಲಿ ನಿರುದ್ಯೋಗ ಸಮಸ್ಯೆಯನ್ನು ಅಂಚಿನಲ್ಲಾದರೂ ಬಗೆಹರಿಸಲಿಕ್ಕೆ ಸಾಧ್ಯವಾಗಲಿಲ್ಲವಷ್ಟೇ ಅಲ್ಲ, ಹೊಸಬರನ್ನು ತಮ್ಮ ಸಾಲಿಗೆ ಸೇರಿಸಿಕೊಳ್ಳುವಂತೆ ಮಾಡಿದೆಂಬುದು ಎಲ್ಲರಿಗೂ ಕಾಣುವ ದುರಂತ ದೃಶ್ಯವಾಗಿದೆ. 1981 ರಲ್ಲಿ ಸರಕಾರವೇ ಒಪ್ಪಿಕೊಂಡಂತೆ ರಿಜಿಸ್ಟರಾದ ನಿರುದ್ಯೋಗಿಗಳ ಸಂಖ್ಯೆ 160ಲಕ್ಷ ಇತ್ತು. ಆರನೆಯ ಯೊಜನೆಯ ಕೊನೆಯ ವೇಳೆಗೆ ಮತ್ತೆ 70-80 ಸಾವಿರ ಜನ ಈ ದಂಡಿಗೆ ಸೇರುತ್ತಾರೆ. ದಾಖಲಾತಿ ಇಲ್ಲದವರ ಸಂಖ್ಯೆಯೂ ಇವರಷ್ಟೇ ಇರಬಹುದಾಗಿದೆ. ಅಂದರೆ 1985 ರಲ್ಲಿ ಆರನೇ ಯೋಜನೆ ಮುಕ್ತಾಯವಾಗುವಾಗ ನಿರುದ್ಯೋಗಿಗಳ ಸಂಖ್ಯೆ ನಾಲ್ಕು ಕೋಟಿಯಾದರೆ ಸಂಶಯಪಡಬೇಕಾದ್ದಿಲ್ಲ.

ಈ ನಾಲ್ಕು ಕೋಟಿಗೆ ಆಸೆ ತೋರಿಸುವ ಉದ್ದೇಶದಿಂದಲೇ ಈ ಎರಡು ಘೋಷಣೆ ಮಾಡಲಾಗಿದೆಂಬುದು ಸ್ಪಷ್ಟವಾಯಿತು. ಅತಿ ನಿಷ್ಠುರವಾಗಿ, ಅತ್ಯಂತ ಕಾಳಜಿಯಿಂದ ಈ ಯೋಜನೆಗಳನ್ನು ಅನುಷ್ಠಾನದಲ್ಲಿ ತಂದದ್ದಾದರೆ ಮೊದಲನೇ ವರ್ಷ ಐದು ಲಕ್ಷ, ಎರಡನೇ ವರ್ಷ ಅಷ್ಟೆ ಸಂಖ್ಯೆ, ಒಟ್ಟು ಹತ್ತು ಲಕ್ಷ ಜನರಿಗೆ ಉದ್ಯೋಗ ಸಿಕ್ಕಂತಾಯಿತು. ಮೂರು ನಾಲ್ಕು ಕೋಟಿಯಲ್ಲಿ ಈ ಹತ್ತು ಲಕ್ಷವನ್ನು ಲೆಕ್ಕ ಮಾಡಲು ಸಾಧ್ಯವಿದೆಯೇ, ಒಂದು ಸಾಸಿವೆಯಷ್ಟಾದರೂ ಪರಿಹಾರ ಕಾಣಬಹುದೇ ?

1969-70ರಲ್ಲಿ ಇಂದಿರಾ ಗಾಂಧಿ ಘೋಷಿಸಿದ "ಗರೀಬಿ ಹಟಾವೋ" ಘೋಷಣೆಯಿಂದಾಗಿ ಕಳೆದ 10-12 ವರ್ಷಗಳಲ್ಲಿ ಗರೀಬರದ್ದೇ ಹಟಾವೋ ಆದ ಅಂಕೆ ಸಂಖ್ಯೆಗಳನ್ನು ಕೇಂದ್ರ ಸರಕಾರವೇ ಪ್ರಕಟಿಸಿದ ಆರನೆಯ ಯೋಜನೆಯ ಪುಸ್ತಕದಲ್ಲಿ ಕಾಣಬಹುದು. ಗ್ರಾಮ ಪ್ರದೇಶದ ಜನ ಸಂಖ್ಯೆಯಲ್ಲಿ ಶೇ 51 ಮಂದಿ, ನಗರ ಪ್ರದೇಶದಲ್ಲಿ ಶೇ 38 ಜನ "ಬಡತನದ ರೇಖೆಯ" ಕೆಳಗಡೆ ಇದ್ದಾರಂತೆ. ಆಗ ಜೀವನ ವೆಚ್ಚದ ಸೂಚ್ಯಾಂಕ 200ಕ್ಕಿಂತ ಕೆಳಗಿತ್ತು. ಈಗ ಅದು 300 ನ್ನು ದಾಟಿದೆ. ಅವಶ್ಯಕ ವಸ್ತುಗಳ ಬೆಲೆಗಳಂತೂ ಯಾವ ಹಂತ ತಲ್ಪಿವೆಂಬುದರ ಅರಿವು ಎಲ್ಲರಿಗಿದೆ.

ಇದಕ್ಕೆಲ್ಲ ಕಾರಣವೇನು ? ನಾವು ಅನುಸರಿಸುತ್ತಿರುವ ಬಂಡವಾಳಶಾಹಿ ನೀತಿ. ಸಮತಾವಾದಿ ದೇಶಗಳಲ್ಲಿ ಉದ್ಯೋಗ ಒದಗಿಸುವ ಜವಾಬ್ದಾರಿ ಸರಕಾರದ್ದಾಗಿರುತ್ತದೆ. ಯೋಜನೆ ತಯಾರಿಸುವಾಗಲೇ ಉತ್ಪಾದನೆ ಎಷ್ಟು ಬೇಕು, ಅದಕ್ಕಾಗಿ ಒಕ್ಕಲತನ ಕೈಗಾರಿಕೆಗಳ ವಿಸ್ತರಣೆ ಯಾವ ರೀತಿ ಮಾಡಬೇಕು, ಅವುಗಳಿಗಾಗಿ ತಂತ್ರಜ್ಞರ, ವಿಜ್ಞಾನಿಗಳ, ಸುಶಿಕ್ಷಿತರ ಸಂಖ್ಯೆ ಎಷ್ಟು ಬೇಕು, ಇವರುಗಳ ತಯಾರಿಕೆಗೆ ಎಷ್ಟು ಶಿಕ್ಷಣ ಸಂಸ್ಥೆಗಳು ಬೇಕು ಎಂದೆಲ್ಲ ಸಮತಾವಾದಿ ಸರಕಾರ ವಿಚಾರ ಮಾಡುತ್ತದೆ. ಆದ್ದರಿಂದ ನಿರುದ್ಯೋಗ ಸಮಸ್ಯೆ ಎಂಬುದೇ ಆ ದೇಶಗಳಲ್ಲಿ ಕಾಣಸಿಗುವುದಿಲ್ಲ. ಆದರೆ ಬಂಡವಾಳಶಾಹಿ ದೇಶಗಳಲ್ಲಿ ವ್ಯಕ್ತಿಯ ಲಾಭಕ್ಕೆ ಪ್ರಾಧಾನ್ಯತೆ, ಇರುವುದರಿಂದ ಇಡೀ ಸಮಾಜವನ್ನೇ ಮರೆಯಲಾಗುತ್ತಿದೆ.

ಸಮಾಜವಾದಿ ದೇಶಗಳಲ್ಲಿ ಆರ್ಥಿಕ ವ್ಯವಸ್ಥೆಯ ಮೇಲೆ ಸರಕಾರದ ಪೂರ್ಣ ನಿಯಂತ್ರಣವಿರುತ್ತದೆ. ಇಂದಿರಾ ಸರಕಾರ ಕೂಡ, ಆ ರೀತಿಯ ನಿಯಂತ್ರಣವನ್ನು ಹಿಡಿದುಕೊಂಡಿದ್ದರೂ ಕೂಡ, ಅಂಥ ಅಧಿಕಾರವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಆದ್ದರಿಂದ ಸರಕಾರಿ ಆಡಳಿತ, ಯೋಜನೆ, ಅಭಿವೃದ್ಧಿ ಕಾರ್ಯಗಳಲ್ಲೆಲ್ಲ ಬಂಡವಾಳದಾರರ ಕೈ ಮೇಲಾಗಿ, ಅವರನ್ನು ಹಿಡಿತದಲ್ಲಿಟ್ಟುಕೊಳ್ಳುವ ಮನಸ್ಸಾಗಲೀ, ಸಾಮರ್ಥ್ಯವಾಗಲೀ ಇಂದಿರಾ ಗಾಂಧಿಗಿಲ್ಲದಿರುವುದರಿಂದಲೇ ಅಪಾರ ಸಂಪನ್ಮೂಲಗಳ ಮಧ್ಯೆ ನಿರುದ್ಯೋಗಿಗಳ, ಬಡವರ ಉಪವಾಸ–ವನವಾಸದ ದೃಶ್ಯಗಳನ್ನು ನೋಡಬೇಕಾಗಿ ಬಂದಿದೆ.

ವಿಫಲತೆಗೊಳ್ಳುತ್ತಿರುವ ತನ್ನ ಆಡಳಿತೆಗೆ ರಸಗೊಬ್ಬರ ಚೆಲ್ಲಿ, ಜನರ ಕಣ್ಣಿಗೆ ಹೆಸರು ಬೆಳೆ ತೋರಿಸುವ ಪ್ರಯತ್ನವನ್ನು ಇಂದಿರಾಗಾಂಧಿಯವರು ಆಗಸ್ಟ್ ಹದಿನೈದರಂದು ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಉದ್ಯೋಗ ಕೊಡಿಸುವ ಎರಡು ಯೋಜನೆಗಳ ಮೂಲಕ ಮಾಡಿದ್ದಾರೆ ನಿಜ. ಆದರೆ ಪಶ್ಚಿಮ ಬಂಗಾಲ, ತ್ರಿಪುರ ಹಾಗೆಯೇ ಕರ್ನಾಟಕ, ಆಂಧ್ರ, ಕಾಶ್ಮೀರ, ರಾಜ್ಯಗಳಲ್ಲಿ ವಿರೋಧಪಕ್ಷದ ಸರಕಾರಗಳಿರುವುದರಿಂದ, ಚುನಾವಣೆಯಲ್ಲಿ ಆ ರಾಜ್ಯಗಳಲ್ಲಿ ತನಗೆ ಸ್ವಲ್ಪವಾದರೂ ಜಯ ಸಿಗುವ ಸಾಧ್ಯತೆ ಕಡಿಮೆ ಇರವುದರಿಂದ ಈ ರಾಜ್ಯಗಳಿಗೆ ಈ ಎರಡೂ ಯೋಜನೆಗಳ ಲಾಭ ಲಭ್ಯವಾಗುವುದು ಕಷ್ಟಕರವೇ ಸರಿ. ಪಶ್ಚಿಮ ಬಂಗಾಲದಲ್ಲಿ "ಕೂಲಿಗಾಗಿ ಕಾಳು" ಯೋಜನೆಯನ್ನು ಯಾವ ರೀತಿ ಅಯಶಸ್ವಿಗೊಳಿಸಲು ಕುತಂತ್ರ ಹೂಡಿದ್ದರೋ, ಹಾಗೆಯೇ ಈ ಎರಡು ಯೋಜನೆಗಳ ಪ್ರಯೋಜನವೂ ಈ ರಾಜ್ಯಗಳ ಜನತೆಗೆ ಲಭ್ಯವಾಗದಂತೆ ಮಾಡುವಲ್ಲಿ ಎಲ್ಲ ಪ್ರಯತ್ನಗಳೂ ಆಗಬಹುದಾಗಿದೆ.

ಈ ಎರಡೂ ಯೋಜನೆಗಳಿಂದ ನಿರುದ್ಯೋಗ ಸಮಸ್ಯೆ ಬಗೆ ಹರಿಯಲು ಸಾಧ್ಯವಿಲ್ಲ. ಇದು ಬರೇ ಚುನಾವಣೆಯ ಸ್ಟಂಟ್ ಎಂದು ಜನರಿಗೆ ಮನವರಿಕೆ ಕೊಟ್ಟು ಅವರಲ್ಲಿ ಜಾಗೃತಿಯನ್ನುಂಟುಮಾಡುತ್ತಿರುವಾಗಲೇ ಪಶ್ಚಿಮ ಬಂಗಾಲ, ತ್ರಿಪುರಗಳ ಎಡರಂಗ ಸರ್ಕಾರಗಳ, ಹಾಗೆಯೇ ಕಾಶ್ಮೀರ ಆಂಧ್ರ, ಕರ್ನಾಟಕಗಳ ವಿರೋಧ ಪಕ್ಷಗಳ ಸರಕಾರದ, ಅಲ್ಲಿಯ ಜನತೆಯ ಹಿತ ರಕ್ಷಣೆ ಮಾಡುವುದೂ ನಮ್ಮ ಕರ್ತವ್ಯವಾಗಿದೆ.

ಬೆಂಗಳೂರು ಆಟೋ ಚಾಲಕರಿಂದ ಧರಣಿ

ಬೆಂಗಳೂರು ಬಸ್ ನಿಲ್ದಾಣಕ್ಕೆ ಆಟೋ ರಿಕ್ಷಾದಲ್ಲಿ ಬಂದ ಪ್ರಯಾಣಿಕರನ್ನು ನಿಲ್ದಾಣದಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಬಿಟ್ಟಮೇಲೆ ಆಟೋಗಳು ಮತ್ತೆ ಹಿಂದಿರುಗಿ ಪ್ರಯಾಣಿಕರ ಹತ್ತುವ ಸ್ಥಳಕ್ಕೆ ಬರಬೇಕಾದರೆ ಈಗ ಬಹಳಷ್ಟು ದೂರ ಸುತ್ತುವರೆದು ಬರಬೇಕಾಗಿದೆ, ಅದರಿಂದ ಸಮಯ, ಇಂಧನ ನಷ್ಟವಾಗುತ್ತದೆ' ವಿಷಯವನ್ನು ಪರಿಶೀಲಿಸಿ ಈಗಿನ ಏಕ ಮುಖ ರಸ್ತೆಯನ್ನು ತೆಗೆದು ಹಿಂದಿನಂತೆ ದ್ವಿಮುಖ ರಸ್ತೆಯನ್ನಾಗಿ ಮಾಡಿಕೊಡಬೇಕೆಂದು ಆಟೋ ಚಾಲಕರ ಸಂಘ ಅಧಿಕಾರಿಗಳಲ್ಲಿ ಒತಾಯ ಪಡಿಸಿದ್ದರೂ ಕೂಡ ಪೋಲೀಸ್ ಇಲಾಖೆಯವರು ಈಡೇರಿಸದೇ ಇದ್ದುದರಿಂದ ದಿನಾಂಕ 29.8.83 ರಂದು ಬೆಳಿಗ್ಗೆ 10.30 ರಿಂದ 12.00 ರವರೆಗೆ."ನೋಎಂಟ್ರಿ" ನಾಮ ಫಲಕದ ಮುಂದೆ ಸಂಘದ ಸದಸ್ಯರು ಪ್ರಧಾನ ಕಾರ್ಯದರ್ಶಿ ಕಾ।ಎ.ವಿ. ರಮೇಶ್ ರವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಚಾಲಕರಿಗೆ ಪೋಲೀಸ್ ಅಧಿಕಾರಿಗಳು ಬಂಧಿಸುವುದಾಗಿ ಬೆದರಿಕೆ ಹಾಕಿದರು. ಚಾಲಕರು ಬೆದರದೆ ಧರಣಿ ಮುಂದುವರೆಸಿದರು. ಈ ಹೋರಾಟಕ್ಕೆ ಮಣಿದ ಪೊಲೀಸ್ ಅಧಿಕಾರಿಗಳು "ನೊಎಂಟ್ರಿ" ಫಲಕವನ್ನು ತೆಗೆದು ಪೋಲೀಸ್ ವಾಹನದಲ್ಲಿ ಹಾಕಿಕೊಂಡು ಹೋಗಿ ದ್ವಿಮುಖ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಪಶ್ಚಿಮ ಬಂಗಾಳ

ಎಡರಂಗ ಸರಕಾರದ ಆರು ವರ್ಷಗಳು

ಶೇಖ್ ನೂರ್ ಮಹಮ್ಮದ್ ಮಂಡಲ್ ಒಬ್ಬ ಮಧ್ಯಮ ವಯಸ್ಸಿನ ಬರ್ಗಾದಾರ. ಅಂದರೆ ತಾನು ಬೆಳೆದ ಬೆಳೆಯಲ್ಲಿ ಒಂದು ಪಾಲನ್ನು ಪಡೆಯುವ ಬೇಸಾಯಗಾರ. ಪ್ರಥಮ ಎಡರಂಗ ಸರಕಾರದ "ಬಾರ್ಗಾ ಕಾರ್ಯಾಚರಣೆ" ಯಲ್ಲಿ ಇತರ ಲಕ್ಷಾಂತರ ಬರ್ಗಾದಾರರಂತೆ ಈತನ ಬಾರ್ಗಾದಾರಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಈತನನ್ನು ಎಡರಂಗದ ಆರು ವರ್ಷಗಳ ಆಡಳಿತದ ಬಗ್ಗೆ ವಿಚಾರಿಸಿದಾಗ ಆತನ ನೇರ ಉತ್ತರ — "ಎಡರಂಗ ಸರಕಾರವಿರದಿದ್ದರೆ ಜಮೀಂದಾರರ ವಿರುದ್ಧ ಹಾಗೂ ಸದ್ಯದ ಬರಗಾಲದ ವಿರುದ್ಧ ಸೆಣಸಾಡುವುದು ನಮಗೆ ಸಾಧ್ಯವಾಗುತ್ತಿರಲಿಲ್ಲ," ಎಡರಂಗ ಸರಕಾರದ "ಬಾರ್ಗಾ ಕಾರ್ಯಾಚರಣೆ"ಯ ನಂತರ ಎಂಟು ಮಂದಿಯ ಕುಟುಂಬದ ತನಗೆ ಸಮಯ-ಸಮಯಕ್ಕೆ ಗೊಬ್ಬರದ ರೂಪದಲ್ಲಿ, ಬೀಜಗಳ ರೂಪದಲ್ಲಿ, ಸಾಲದ ರೂಪದಲ್ಲಿ ದೊರೆತ ಸೌಲಭ್ಯಗಳನ್ನು ನೆನೆಸಿಕೊಂಡ ಮಂಡಲ್ ಎಡರಂಗ ಅಧಿಕಾರದಲ್ಲೇ ಉಳಿಯಬೇಕು ಎಂಬ ತನ್ನ ಆಕಾಂಕ್ಷೆಯನ್ನು ವ್ಯಕ್ತಪಡಿಸಿದ. ಯಾಕೆಂದರೆ ಅಭಿವೃದ್ಧಿ ಯೋಜನೆಗಳನ್ನು ಜಾರಿಮಾಡುವುದು ಎಡರಂಗ ಸರಕಾರದಿಂದ ಮಾತ್ರ ಸಾಧ್ಯ ಎಂದು ಅವನ ಅನುಭವ.

ಸಮಸ್ಯೆಗಳ ಬಗ್ಗೆ ಪ್ರಶ್ನಿಸಿದಾಗ— "ನಾವು ಪ್ರಗತಿ ಸಾಧಿಸುತ್ತಿದ್ದೇವೆ. ಇನ್ನೂ ಕೆಲವು ಸಮಸ್ಯೆಗಳಿವೆ. ನಿಜ. ಆದರೂ ನಾವು ದುಡಿಯುತ್ತೇವೆ ಹಾಗೂ ಪರಿಹಾರಕ್ಕಾಗಿ ಕಾಯಲು ಸಿದ್ಧರಿದ್ದೇವೆ. ಯಾಕೆಂದರೆ ಪರಿಹಾರ ಸಿಕ್ಕೇಸಿಗುತ್ತದೆ ಎಂಬ ನಿರೀಕ್ಷೆ ನಮಗಿದೆ" ಎಂದು ಖಡಾಖಂಡಿತವಾಗಿ ನುಡಿದ ಈ ಬಡ ಗೇಣೀದಾರ.

'ದಮನದ ದಿನಗಳು ಇನ್ನಿಲ್ಲ'

ಶಿವಪ್ರಸಾದ್ ಘೋಷ್ 28 ವರ್ಷ ವಯಸ್ಸಿನ ಒಬ್ಬ ಕಾರ್ಮಿಕ. ಕೋನ್‌ನಗರದ ಶೆರಾಯಿಕೆಲ್ಲಾ ಗ್ಲಾಸ್ ವರ್ಕ್ಸ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಂಜುದೂರನಾಗಿ ದುಡಿಯುತ್ತಿದ್ದಾನೆ. ಆತನನ್ನು ಎಡರಂಗದ ಅಧಿಕಾರದ ಬಗ್ಗೆ ಪ್ರಶ್ನಿಸಿದಾಗ "ಕಳೆದ ಆರು ವರ್ಷಗಳಲ್ಲಿ ನಮ್ಮ ಪ್ರಜಾಪ್ರಭುತ್ವ ಹಕ್ಕು ಮರಳಿ ದೊರೆತಿದೆ. ಆದ್ದರಿಂದ ನಾನೀಗ ಅವನ್ನು ಅರ್ಥಪೂರ್ಣಗೊಳಿಸಲು ಕೇವಲ ಹಕ್ಕುಗಳ ಬಗ್ಗೆ ಮಾತ್ರವಲ್ಲ ಕರ್ತವ್ಯಗಳ ಬಗ್ಗೆಯೂ ಯೋಚಿಸುತ್ತಿದ್ದೇನೆ." ಎಂದು ಉತ್ತರಿಸಿದ. ಕಾರ್ಮಿಕ ರಂಗದಲ್ಲಿ ಕೈಗಾರಿಕಾ ರಂಗದಲ್ಲಿ ಎಡರಂಗ ಸರ್ಕಾರ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ ಎಂಬುದು ಆತನ ಅನುಭವ. "ಕಾರ್ಮಿಕರು ಹಾಗೂ ಕೂಲಿಕಾರರಿಗೆ ಎಡರಂಗ ಸರ್ಕಾರದ ಮೇಲೆ ಸಂಪೂರ್ಣ ಭರವಸೆಯಿದೆ. ಯಾಕೆಂದರೆ ಕೆಲಸದ ಜಾಗದಲ್ಲೂ, ಮನೆಯಲ್ಲೂ, ಸುತ್ತ ಮುತ್ತ ಎಲ್ಲೆಲ್ಲೂ ಪ್ರಗತಿಯಾಗುತ್ತಿದೆ ಎಂಬುದನ್ನು ಅವರು ಕಾಣುತ್ತಿದ್ದಾರೆ." ಎಡರಂಗ ಅಧಿಕಾರಕ್ಕೆ ಬರುವ ಮೊದಲಿನ ದಿನಗಳದ್ದು "ಭಯಾನಕ ಅನುಭವ" ಎಂದು ವರ್ಣಿಸಿದ ಆತ. "ಆ ದಿನಗಳು ಮತ್ತೆಂದೂ ಬರದಿರಲಿ ಎಂದೇ ನಾವು ಎಡರಂಗ ಸರಕಾರಕ್ಕೆ ಸಂಪೂರ್ಣ ಬೆಂಬಲ ಕೊಡುತ್ತಿದ್ದೇವೆ. ಎಡರಂಗ ಸರ್ಕಾರದ ಪ್ರಜಾಸತ್ತಾತ್ಮಕ ಆಡಳಿತದಲ್ಲಿ ಅಂತಹ ದಮನಕಾಂಡ ಮರುಕಳಿಸಲು ಸಾಧ್ಯವೇ ಇಲ್ಲ ಎಂಬುದು ನಮ್ಮ ನಂಬಿಕೆ, ನಮ್ಮ ಅನುಭವ. ಆದ್ದರಿಂದ ಎಡರಂಗ ಅಧಿಕಾರದಲ್ಲೇ ಉಳಿಯಬೇಕು ಎಂಬುದು ನಮ್ಮ ಆಸೆ" ಎಂದು ಐದು ಜನರ ಕುಟುಂಬ ಹೊಂದಿದ ಈ ಕಾರ್ಮಿಕ. ಮೇಲೆ ಹೇಳಿದ ಬಡ ಗೇಣೀದಾರನಂತೆ ಖಡಾಖಂಡಿತವಾಗಿ ನುಡಿದ.

“ರಾಜಕೀಯ ಪ್ರಜ್ಞೆ ಹೆಚ್ಚಿದೆ”

"ರೈತರು, ಕಾರ್ಮಿಕರು ಹಾಗೂ ಮಧ್ಯಮ ವರ್ಗದ ನಮ್ಮ ಜನ ಆರ್ಥಿಕ ಪ್ರಯೋಜನ ಪಡೆದಿದ್ದಾರೆ ಮಾತ್ರವಲ್ಲ ಅವರು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರಳಿ ಪಡೆದು ಅವು ಮತ್ತಷ್ಟು ವಿಸ್ತಾರಗೊಂಡುದನ್ನು ಕಂಡಿದ್ದಾರೆ. ಇದು ಅವರಲ್ಲಿನ ರಾಜಕೀಯ ಪ್ರಜ್ಞೆಯನ್ನು ಮತ್ತಷ್ಟು ಮೇಲ್ಮಟ್ಟಕ್ಕೆ ಎತ್ತರಿಸಿದೆ" ಎಡರಂಗದ ಅಧ್ಯಕ್ಷ ಸರೋಜ್ ಮುಖರ್ಜಿಯವರ ಈ ಹೇಳಿಕೆ ಕೇವಲ ಜಂಭದ ಮಾತಲ್ಲ ಎಂಬುದು ಮೇಲೆ ತಿಳಿಸಿದ ಕಾರ್ಮಿಕ ಹಾಗೂ ಕೃಷಿಕನ ಅನುಭವದಿಂದ ಸ್ಪಷ್ಟವಾಗುತ್ತದೆ.

ಪಶ್ಚಿಮ ಬಂಗಾಳದ ಜನತೆ ಈಗ ಎಡರಂಗ ಸರಕಾರ ಸೀಮಿತ ಅಧಿಕಾರ ವ್ಯಾಪ್ತಿಯೊಳಗೇ ಸಾಧ್ಯವಾದುದನ್ನೆಲ್ಲಾ ಮಾಡಿದೆ, ಮಾಡುತ್ತಿದೆ; ಈ ಸೀಮಿತ ಅಧಿಕಾರದಿಂದ ಎಲ್ಲಾ ಮೂಲಭೂತ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ ಎಂಬುದನ್ನು ಅವರು ಅರಿತಿದ್ದಾರೆ. ಆದ್ದರಿಂದಲೇ ಅವರು ಕಳೆದ ವರ್ಷ ಎಡರಂಗವನ್ನು ಮತ್ತೊಮ್ಮೆ ಭಾರೀ ಬಹುಮತದಿಂದ ಅಧಿಕಾರಕ್ಕೆ ತಂದಿದ್ದಾರೆ.

"1977ರಲ್ಲಿ ನಾವು ಪಡೆದ ವಿಜಯ ವಾಸ್ತವವಾಗಿ ನಮ್ಮದಾಗಿರಲಿಲ್ಲ. ಜನತೆ ಕಾಂಗ್ರೆಸ್ ದಮನದ ವಿರುದ್ಧ ಮತ ನೀಡಿದ್ದರು. ಆದರೆ 1982ರಲ್ಲಿ ಹಾಗಾಗಲಿಲ್ಲ. ಈ ಬಾರಿ ಜನತೆ ನಮ್ಮ ಐದು ವರ್ಷಗಳ ಪ್ರಶಂಸಾರ್ಹ ಕಾರ್ಯನಿರ್ವಹಣೆಗಾಗಿಯೇ ನಮ್ಮನ್ನು ಅಧಿಕಾರಕ್ಕೆ ತಂದರು" ಎನ್ನುವ ಸರೋಜ್ ಮುಖರ್ಜಿಯವರ ಅಭಿಪ್ರಾಯದಲ್ಲಿ ಇದು ನಿಜವಾಗಿಯೂ ಎಡರಂಗ ಗಳಿಸಿದ ವಿಜಯ. ಇತ್ತೀಚಿನ ಪಂಚಾಯತು ಚುನಾವಣೆಗಳೂ ಅವರ ಈ ಅಭಿಪ್ರಾಯವನ್ನು ಮತ್ತಷ್ಟು ದೃಢಪಡಿಸಿವೆ.

ಎಡರಂಗ ಸರಕಾರದ ಸಮಸ್ಯೆಗಳ ಬಗ್ಗೆ ಹೇಳುತ್ತ "ಇನ್ನೂ ಪರಿಹಾರ ಕಾಣಬೇಕಾದ ಸಮಸ್ಯೆಗಳು ಇವೆ.

ಉದಾಹರಣೆಗೆ ಕಲಕತ್ತೆಯ ಸಂಚಾರ ಸಮಸ್ಯೆ. ವಿದ್ಯುಚ್ಛಕ್ತಿ ವಲಯದಲ್ಲು ಸಮಸ್ಯೆ ಇನ್ನೂ ಇದೆ.

ಬೇರೆ ರಾಜ್ಯಗಳಲ್ಲೂ ಈ ಸಮಸ್ಯೆ ಇಷ್ಟೇ ತೀವ್ರವಾಗಿದೆ. ಕೇಂದ್ರ ಸರಕಾರದ ತಪ್ಪು ಯೋಜನೆಯೇ ಇದಕ್ಕೆ ಕಾರಣ. ಕೆಲವೊಮ್ಮೆ ನಮ್ಮ ಕಾರ್ಯ ನಿರ್ವಾಹಣೆಯನ್ನು ಬುಡಮೇಲುಮಾಡುವ ಪ್ರಯತ್ನ ನಡೆಯುತ್ತಾ ಇದೆ ಎಂದ ಅವರು ಈ ಸಂದರ್ಭದಲ್ಲಿ ಪ್ರಥಮ ಎಡರಂಗ ಸರಕಾರ ಅಧಿಕಾರ ವಹಿಸಿಕೊಳ್ಳುವಾಗ ಜ್ಯೋತಿ ಬಸು ರವರು ಹೇಳಿದ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾರೆ "ಈ ಸರಕಾರ ಕೇವಲ ರೈಟರ್ಸ ಬಿಲ್ಡಿಂಗ್‌ನಿಂದ ಕಾರ್ಯನಿರ್ವಹಿಸುವುದಿಲ್ಲ. ಇದಕ್ಕೆ ಜನ ಸಾಮಾನ್ಯರ ಇಚ್ಛೆಯೇ ಮಾರ್ಗದರ್ಶನ ನೀಡುತ್ತದೆ." ಎಡರಂಗಧ ವಿರೋಧಿಗಳು ಸರಕಾರದ ಕಾರ್ಯವನ್ನು ಅಸ್ತವ್ಯಸ್ತಗೊಳಿಸಲು ಸಾಕಷ್ಟು ಪ್ರಯತ್ನ ನಡೆಸಿದರೂ ಸಫಲವಾಗಲಿಲ್ಲ, ಯಾಕೆಂದರೆ ಅವರಿಗೆ ಜನತೆಯ ಬೆಂಬಲ ವಿರಲಿಲ್ಲ. ಜನರ ಬೆಂಬಲ ಎಡರಂಗಕ್ಕೆ ಮತ್ತಷ್ಟು ಬಲ ನೀಡಿದೆ

'ಮುನ್ನಡೆಯುತ್ತೇನೆ'

ಎಡರಂಗ ಸರಕಾರದ ಸಮಸ್ಯೆಗಳ ಬಗ್ಗೆ ಮುಂದುವರಿಯುತ್ತಾ ಇದಕ್ಕೆ ಒಂದು ಕಾರಣ ರಾಜ್ಯಗಳ ಸೀಮಿತ ಅಧಿಕಾರವಾದರೆ ಇನ್ನೊಂದು ಪಶ್ಚಿಮ ಬಂಗಾಳದಲ್ಲಿ ಒಂದು ಎಡಪಂಥೀಯ ಸರಕಾರವಿರುವುದರಿಂದಾಗಿ ರಾಜ್ಯದ ಬಗ್ಗೆ ಮಲತಾಯಿ ಧೋರಣೆ ವಹಿಸಲಾಗಿದೆ ಎಂದು ಸರೋಜ ಮುಖರ್ಜಿ ಪುರಾವೆ ಸಹಿತ ವಿವರಿಸುತ್ತಾರೆ "ಪ್ರಜಾಸತ್ತಾತ್ಮಕ ಚಳವಳಿ ಬಲಗೊಳ್ಳುತ್ತಿರುವಂತೆ ಕೇಂದ್ರದ ದಮನವೂ ಹೆಚ್ಚುತ್ತಿದೆ. ರಾಷ್ಟ್ರೀಯ ಆಂದೋಲನದ ದಿನಗಳಿಂದಲೂ ಪಶ್ಚಿಮ ಬಂಗಾಲ ದಮನವನ್ನು ಎದುರಿಸಿದೆ. ಯಾಕೆಂದರೆ ಇಲ್ಲಿಯ ಪ್ರಜಾಸತ್ತಾತ್ಮಕ ಚಳವಳಿಯನ್ನು ಮುರಿಯುವುದು ಎಂದೂ ಸಾಧ್ಯವಾಗಲಿಲ್ಲ. ನಮಗೀಗ ಅನ್ಯಾಯದ ವಿರುದ್ಧ ಹೋರಾಟದ ಹೊರತು ಬೇರೆ ದಾರಿಯಿಲ್ಲ. ನಾವು ಈ ದಾರಿಯಲ್ಲಿ ಮುನ್ನಡೆಯಲು ನಿರ್ಧರಿಸಿದ್ದೇವೆ. ಎಂದು ಸರೋಜ್ ಮುಖರ್ಜಿ ಘೋಷಿಸಿದ್ದಾರೆ.

ಎಡರಂಗ ಜನತೆಯ ಅಪಾರ ಒಲವು ಗಳಿಸಿದೆಯೆಂಬುದನ್ನು ಈಗ ಯಾರೂ ಅಲ್ಲಗಳೆಯಲಾರರು. ಆದರೆ ಜನತೆಯಿತ್ತ ಭರವಸೆಯಿಂದ ತಾವು ಸಂತೃಪ್ತರಾಗಿ ಕುಳಿತಿರುವುದಿಲ್ಲ ಎಂದು ಸರಕಾರ ನಿರ್ಧರಿಸಿದೆ. ಸರೋಜ ಮುಖರ್ಜಿಯವರ ಮಾತುಗಳಲ್ಲೇ ಹೇಳಬೇಕಾದರೆ, "ಜನತೆಯ ಕಲ್ಯಾಣದ ಎಲ್ಲಾ ಕಾರ್ಯಕ್ರಮಗಳನ್ನು ಸಾಮೂಹಿಕ ಪ್ರಯತ್ನಗಳಿಂದ ಜಾರಿಗೊಳಿಸಬೇಕೆಂದು ನಿರ್ಧರಿಸಿದ್ದೇವೆ. ಯಾಕೆಂದರೆ ವೈಯಕ್ತಿಕ ಪ್ರಯತ್ನ ನಿಷ್ಫಲವಾಗುತ್ತದೆ. ಜನತೆಯ ಅಭ್ಯುದಯದ ಕಾರ್ಯಕ್ರಮಗಳನ್ನು ನೆರವೇರಿಸಬೇಕಾದರೆ ಜನತೆಯ ಹಿತಾಸಕ್ತಿ ಕಾಪಾಡಬೇಕೆಂದರೆ ಪ್ರಜಾಸತ್ತಾತ್ಮಕ ವಿಧಾನವನ್ನೇ ಅನುಸರಿಸಬೇಕು."

ಇತರ ರಾಜ್ಯಗಳಲ್ಲಿ ಪ್ರಭಾವ

ಪಶ್ಚಿಮ ಬಂಗಾಳದ ಎಡರಂಗದ ಯಶಸ್ಸು ಭಾರತದ ಇತರ ರಾಜ್ಯಗಳಿಗೆ ಸ್ಫೂರ್ತಿ ನೀಡಿದೆಯೇ ಎಂದು ಕಾ|. ಮುಖರ್ಜಿಯವರನ್ನು "ವೆಸ್ಟ್ ಬೆಂಗಾಲ್" ಪತ್ರಿಕೆ ಪ್ರಶ್ನಿಸಿದಾಗ "ನಾವು ಹೊರಗೆ ಹೋದಾಗಲೆಲ್ಲಾ ನಮ್ಮ ಕಾರ್ಯ ನಿರ್ವಹಣೆಯ ಬಗ್ಗೆ ನಮ್ಮನ್ನು ಕೇಳಲಾಗುತ್ತಿದೆ.

ನಾವು ನಡೆಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮ ಗಳಿಗೆ ಪ್ರಚಾರ ಸಿಗುವುದಿಲ್ಲ. ಯಾಕೆಂದರೆ ಮಾಧ್ಯಮದ ಯಜಮಾನರು ನಮ್ಮ ವಿರುದ್ಧವಿದ್ದಾರೆ. ಎಡರಂಗ ಸರಕಾರ ದೇಶದ ಉಳಿದ ಭಾಗದ ಜನತೆಯೆದುರು ಎಡ ಪ್ರಜಾಪ್ರಭುತ್ವ ಆಂದೋಲನದ ಉದಾಹರಣೆಯಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಅದರ ಚಟುವಟಿಕೆಗಳಿಗೆ ವ್ಯಾಪಕ ಪ್ರಚಾರ ನೀಡಲು ಹೆಚ್ಚಿನ ಒತ್ತು ನೀಡಬೇಕು" ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ವ್ಯಾಪಕ ಪ್ರಚಾರ ಸಿಕ್ಕರೆ ಪಶ್ಚಿಮ ಬಂಗಾಳದ ಎಡ ರಂಗ ಸರಕಾರದ ಚಟುವಟಿಕೆ ಗಳಿಂದ ಭಾರತದ ಇತರ ರಾಜ್ಯಗಳ ಪ್ರಜಾಪ್ರಭುತ್ವವಾದೀ ಚಳುವಳಿಗಳಿಗೂ ಭಾರಿ ಸ್ಫೂರ್ತಿ ದೊರೆಯುತ್ತದೆ ಎಂಬ ಕಾ|. ಮುಖರ್ಜಿಯವರ ಅಭಿಪ್ರಾಯ ಅಕ್ಷರಷ ನಿಜ.

ಬೆಳ್ತಂಗಡಿ

ರೈತರ ಸಭೆ

ಬೆಳ್ತಂಗಡಿ ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ತಾಲ್ಲೂಕು ಸರಕಾರಿ, ಬಂಜರು ಭೂಮಿ ಕೃಷಿಕರ ಸಭೆಯು 3-9-1983 ರಂದು ಉಜಿರೆಯಲ್ಲಿ ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾ| ಕೆ, ಚಿನ್ನಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿತು.

ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಗಳಿಂದ ಪ್ರತಿನಿಧಿಗಳು ಆಗಮಿಸಿದ್ದು, ಸರಕಾರಿ ಬಂಜರು ಭೂಮಿಯ ಕೃಷಿಕರಿಂದ ವಸೂಲಾಗುತ್ತಿರುವ ದಂಡ ವಸೂಲಿ ಒಕ್ಕಲು ಎಬ್ಬಿಸುವ ನೋಟೀಸು ಹಾಗೂ ಕುಂಟು ನೆಪಗಳ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ಸಭೆಗೆ ಆಗಮಿಸಿದ್ದ, ಬೆಳ್ತಂಗಡಿ, ಸುಳ್ಯ, ಪುತ್ತೂರು ತಾಲೂಕುಗಳ ದರ್ಕಾಸ್ತುದಾರರ ಹೋರಾಟ ಸಮಿತಿಯ ಅಧ್ಯಕ್ಷ ಕಾ| ಎಂ. ಕೆ. ಭಟ್‌ರವರು ಮಾತನಾಡಿ ರಾಜ್ಯ ರೈತಸಂಘದ ವತಿಯಿಂದ ಸರಕಾರಕ್ಕೆ ನೀಡಿದ ಮನವಿ, 15-6-83 ರಂದು ಸಾವಿರಾರು ದರ್ಕಾಸ್ತುದಾರರ ಸಮ್ಮೇಳನ ನಡೆದು ಪುತ್ತೂರಿನಲ್ಲಿ ಅಸಿಸ್ಟಂಟ್ ಕಮಿಷಿನರ್‌ರವರ ಮೂಲಕ ಅರ್ಪಿಸಿದ ಮನವಿಗಳ ವಿವರಣೆ ನೀಡಿ, ಇಷ್ಟಾದರೂ ಸರಕಾರ ಈ ಸಮಸ್ಯೆಯನ್ನು ಬಗೆಹರಿಸಲು ಗಮನ ನೀಡದಿರುವುದರರ ವಿರುದ್ಧ ತೀವ್ರ ಚಳವಳಿಗೆ ಮುಂದಾಗಬೇಕೆಂದು ಕರೆ ನೀಡಿದರು.

ನಂತರ ವಿವಿಧ ಗ್ರಾಮಗಳಿಂದ ಭಾಗವಹಿಸಿದ ಪ್ರತಿನಿಧಿಗಳಾದ ಕಾ|| ಕುಕ್ಕಪ್ಪಗೌಡ, ಲಕ್ಷ್ಮಣಗೌಡ, ಅಣ್ಣಿಗೌಡ, ಕೇಶವ, ಥೋಮಸ್ ಕರಿಯನ್ನಾಕ್, ಕೆ. ವಿ. ರಾವ್ ಕೃಷ್ಣ ಮುಗೇರ, ಬಾಬುಸಫಲ್ಯ ಸಿದ್ಧಪ್ಪ ಪೂಜಾರಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿ ಇದೇ ತಾರೀಖು 30-9-1983ರಂದು ಸುಮಾರು 400ಕ್ಕೂ ಮೇಲ್ಪಟ್ಟು ಸರಕಾರೀ ಬಂಜರು ಭೂಮಿ ಕೃಷಿಕರು ಧರ್ಮಾರ್ಥ ಡಿ. ನೋಟೀಸು ಸಿಗುವಂತೆ ಸರಕಾರವನ್ನು ಒತ್ತಾಯಿಸಲು ತಾಲ್ಲೂಕು ಕಚೇರಿಯೆದುರು ಧರಣಿ ಸತ್ಯಾಗ್ರಹದ ಕಾರ್ಯಕ್ರಮ ಹಾಕಲು ತೀರ್ಮಾನಿಸಿದರು. ಅಲ್ಲದೆ ಸರದಿಯಲ್ಲಿ ಗ್ರಾಮಗ್ರಾಮಗಳಿಂದ ಜಾಥ ಬಂದು ತಾಲ್ಲೂಕು ಕಚೇರಿಯೆದುರು ಸತ್ಯಾಗ್ರಹವನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಯು. ಜನಾರ್ಧನ ನಾಯಕ್‌ರವರು ಇಡೀ ಜಿಲ್ಲೆಯ ರೈತರ ಬೆಂಬಲ ಸಾರಿ ಶುಭ ಕೋರಿ ಮಾತನಾಡಿದರು. ಆರಂಭದಲ್ಲಿ 3 ತಾಲ್ಲೂಕುಗಳ ದರ್ಕಾಸ್ತು ಹೋರಾಟ ಸಮಿತಿಯ ಸಂಚಾಲಕರಲ್ಲೊಬ್ಬರಾದ ಕಾ|| ಬಿ. ವಿಷ್ಣುಮೂರ್ತಿಯವರು ಸ್ವಾಗತಿಸಿ ಹೋರಾಟ ಸಮಿತಿಯ ಹಾಕಿದ ಕಾರ್ಯಕ್ರಮಗಳ ವಿವರಣೆ ನೀಡಿದರು. ಕೊನೆಯಲ್ಲಿ ಕಾ| ಕೆ.ವಿ. ರಾವ್ ಧನ್ಯವಾದವಿತ್ತರು.

ತುಮಕೂರು :

ಎಸ್. ಎಫ್. ಐ. ನಿಂದ ಮನವಿ

ರಾಜ್ಯದಲ್ಲಿ ವಿದ್ಯಾಭ್ಯಾಸದ ವ್ಯಾಪಾರೀಕರಣವನ್ನು ತಡೆಗಟ್ಟಬೇಕು ಡೊನೇಷನ್, ಕ್ಯಾಪಿಟೇಶನ್ ಶುಲ್ಕ ವಸೂಲಾತಿಯನ್ನು ಸಂಪೂರ್ಣವಾಗಿ ರದ್ದು ಪಡಿಸಬೇಕು, ಬಡ ವಿಧ್ಯಾರ್ಥಿಗಳನ್ನು ಮತ್ತು ಪೋಷಕರನ್ನು ನಾನಾ ರೀತಿಯಲ್ಲಿ ಸುಲಿಗೆ ಮಾಡುತ್ತಿರುವ ಖಾಸಗೀ ವಿದ್ಯಾರ್ಥಿ ಸಂಸ್ಥೆಗಳನ್ನು ಸರ್ಕಾರವೇ ವಹಿಸಿ ಕೊಳ್ಳಬೇಕು. ಮುಂತಾದ ಬೇಡಿಕೆಗಳ ಬಗ್ಗೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಎಸ್. ಎಫ್. ಐ. ತುಮಕೂರು ನಗರ ಸಮಿತಿಯು ರಾಜ್ಯ ಸಮಿತಿಯ ಕರೆಯ ಮೇರೆಗೆ ವಿದ್ಯಾರ್ಥಿಗಳಿಂದ ಹಾಗೂ ಪೋಷಕರಿಂದ ಸಹಿ ಸಂಗ್ರಹ ಚಳವಳಿ ನಡೆಸಿ 1.9.83ರಂದು ಎಸ್. ಎಫ್. ಐ. ನ ನಿಯೋಗವು ಜಿಲ್ಲಾಧಿಕಾರಿಗಳ ಸಹಾಯಕ ಅಧಿಕಾರಿಯವರನ್ನು ಭೇಟಿ ಮಾಡಿ ವಿದ್ಯಾರ್ಥಿ ಹಾಗೂ ಪೋಷಕರ ಸಹಿ ಸಂಗ್ರಹವುಳ್ಳ ಮನವಿ ಪತ್ರವನ್ನು ಸಲ್ಲಿಸಿ ಅದನ್ನು ಮುಖ್ಯಮಂತ್ರಿಯವರಿಗೆ ತಲುಪಿಸಬೇಕೆಂದು ವಿನಂತಿಸಿಕೊಂಡಿತು.

ನಿಕಾರಾಗುವ : ಕ್ರಾಂತಿಯ ನಾಲ್ಕನೇ ವಾರ್ಷಿಕೋತ್ಸವ

--ಸುಧೀಂದ್ರ

ನಾಲ್ಕು ವರ್ಷಗಳ ಹಿಂದೆ ಯಶಸ್ವೀ ಕ್ರಾಂತಿ ನೆರವೇರಿಸಿ ಜಗತ್ತಿನ ಜನರ ಗಮನವನ್ನಾಕರ್ಷಿಸಿದ್ದ ನಿಕಾರಾಗುವಾ ಈಗ ಮತ್ತೆ ಜಾಗತಿಕ ಸುದ್ದಿಗಳ ಸುಳಿಯಲ್ಲಿ ಮೇಲೆದ್ದು ಬರುತ್ತಿದೆ. ಮಧ್ಯ ಅಮೇರಿಕದಲ್ಲಿ ರೀಗನ್ ಸರ್ಕಾರ ನಡೆಸುತ್ತಿರುವ ಆಕ್ರಮಕ ಯುದ್ಧ ಸನ್ನಾಹದ ಎರಡು ಮುಖ್ಯ ಗುರಿಗಳಲ್ಲಿ ನಿಕಾರಾಗುವಾ ಒಂದಾಗಿದೆ : (ಕ್ಯೂಬಾ ಇನ್ನೊಂದು) ಧೀರ್ಘಕಾಲದ ಸಶಸ್ತ್ರ ಹೋರಾಟದ ನಂತರ ಜಯಗಳಿಸಿ, ಕ್ರಾಂತಿಯನ್ನು ಸುಸ್ಥಿರಗೊಳಿಸಿ ಅದರ ಲಾಭಗಳನ್ನು ತನ್ನ ಜನರಿಗೆ ತಲುಪಿಸಲು ಪ್ರಯತ್ನಿಸುತ್ತಿರುವಾಗಲೇ ದೇಶದ ಕ್ರಾಂತಿಕಾರಿ ಸರಕಾರಕ್ಕೆ ಭಯಂಕರ ಗಂಡಾಂತರವನ್ನೆದುರಿಸಬೇಕಾಗಿ ಬಂದಿದೆ. ಈ ನಾಲ್ಕು ವರ್ಷಗಳುದ್ದಕ್ಕೂ ಸಿ. ಐ. ಎ. (ಅಮೇರಿಕದ ಸಂಯುಕ್ತ ಸಂಸ್ಥಾನಗಳ ಕುಖ್ಯಾತ ಗುಪ್ತಚಾರ ಸಂಸ್ಥೆ) ಬೆಂಬಲಿತ ಪ್ರತಿಕ್ರಾಂತಿಕಾರಿಗಳು ನಡೆಸುತ್ತಾ ಬಂದಿರುವ ಪಿತೂರಿ ಮತ್ತು ನೆರೆಯ ದೇಶ ಹೊಂಡುರಾಸ್ ರೀಗನ್ನರ ಕೃಪಾಹಸ್ತದಿಂದ ನಡೆಸುತ್ತಾ ಬಂದಿರುವ ನಿಕಾರಾಗುವ ಮೇಲಿನ ದಾಳಿಗಳು ಇತ್ತೀಚಿನ ತಿಂಗಳುಗಳಲ್ಲಿ ಗಣನೀಯವಾಗಿ ಹೆಚ್ಚಿವೆ. ಈಗೀಗ ಅಂತೂ ಕ್ಯೂಬಾ ಮತ್ತು ನಿಕಾರಾಗುವಾಗಳ ಮೇಲೆ ಕೆಂಡಕಾರಿ ಅಮೇರಿಕದ ಅಧ್ಯಕ್ಷ ರೀಗನ್ ಪತ್ರಿಕೆಗಳಿಗೆ ಹೇಳಿಕೆ ಕೊಡದ ದಿನವೇ ಇಲ್ಲ. ಹೊಂಡುರಾಸ್, ಗ್ವಾಟೇಮಾಲಾ, ಎಲ್. ಸಾಲ್ವಡೋರ್ ಮುಂತಾದ ಸೈನಿಕ–ಸರ್ವಾಧಿಕಾರಶಾಹಿಗಳಾದ ತನ್ನ ಕೈಗೊಂಬೆ ಸರಕಾರಗಳಿಗೆ ಶಸ್ತ್ರ ಸಹಾಯವನ್ನು ವಿಪರೀತ ಹೆಚ್ಚಿಸುವುದಲ್ಲದೇ, ಅವಶ್ಯ ಬಿದ್ದರೆ ಸನಿಹದಲ್ಲೇ ತನ್ನ ಸ್ವಂತ ಪಡೆಗಳನ್ನು ನುಗ್ಗಿಸುವ ಯೋಜನೆಯನ್ನು ರೀಗನ್ ಸರಕಾರ ಸಿದ್ಧಪಡಿಸಿದೆ. ಅಮೇರಿಕದ ಈ ಯುದ್ಧಖೋರತನದ ಈ ಹೊಸ ಆವೃತ್ತಿಯನ್ನು ಕಂಡು ಅಪಾಯದ ಮುನ್ಸೂಚನೆಯನ್ನು ಗುರುತಿಸಿ ಅದ್ಯಾವ ರೀತಿಯಲ್ಲೂ ಕಮ್ಯೂನಿಸ್ಟ್ ಅಥವಾ ಎಡ ಹಿತೈಷಿ ಸರಕಾರಗಳಲ್ಲದ ಮೆಕ್ಸಿಕೋ, ಕೊಲಂಬಿಯಾ, ಪನಾಮ ಮುಂತಾದ ರಾಷ್ಟ್ರಗಳ ಸರಕಾರಗಳೂ ಕೂಡ ರೀಗನ್ ಯೋಜನೆ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸುವುದಲ್ಲದೇ ಹಲವು ರೀತಿಯಲ್ಲಿ ಶಾಂತಿ ಸ್ಥಾಪನೆಗಾಗಿ ಕ್ರಿಯಾಶೀಲವಾಗಿವೆ. ನಿಕಾರಾಗುವಾದಲ್ಲಂತೂ ಈಗ ಇಡೀ ಜನತೆಯೇ ತಾಯ್ನಾಡಿನ ಮತ್ತು ಕ್ರಾಂತಿಯ ರಕ್ಷಣೆಗೆ ಶಸ್ತ್ರಸನ್ನದ್ಧವಾಗಿ ನಿಂತಿದೆ. ರಾಜಧಾನಿ ಮನಾಗುವಾ ಮತ್ತಿತರ ಹಳ್ಳಿಪಟ್ಟಣಗಳಲ್ಲೆಲ್ಲ "ಅವರನ್ನು ಒಳನುಗ್ಗಲು ಬಿಡಲಾರೆವು.!" ಎಂದು ಸ್ಪ್ಯಾನಿಶ್‌ನಲ್ಲಿ ಬರೆದ ಮಾರ್ಗಫಲಕಗಳು ಕಂಗೊಳಿಸುತ್ತಿವೆ.

ಈ ಎಲ್ಲಾ ಕಷ್ಟಗಳ ಮಧ್ಯೆಯೂ ನಿಕಾರಾಗುವಾದ ನಾಲ್ಕು ವರ್ಷಗಳ ಪ್ರಗತಿಯು ಅಚ್ಚರಿಗೊಳಿಸುವಂಥದು. 2.5 ದಶಲಕ್ಷ ಜನಸಂಖ್ಯೆಯ, 133,000 ಚ.ಕಿ.ಮೀ. ಕ್ಷೇತ್ರವುಳ್ಳ ಮಧ್ಯ ಅಮೇರಿಕದ ಈ ದೇಶವು ತನ್ನ ನೆರೆಯ ಪುಟ್ಟ ರಾಷ್ಟ್ರಗಳ ದುಃಸ್ಥಿತಿಯಲ್ಲೇ ಜುಲೈ 19, 1979ರವರೆಗೆ ಬಳಲುತ್ತ ಬಂದಿತ್ತು. ಮೊದಲಿದ್ದ ಸರ್ವಾಧಿಕಾರಶಾಹಿ ಸೋಮೋಝಾ ದೇಶವನ್ನು ಅಮೇರಿಕದ ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆಇಟ್ಟಂತೆ ಆಡಳಿತ ನಡೆಸಿ ದೇಶದ ಸಂಪತ್ತೆಲ್ಲ ಬರಿದಾಗುವಂತೆ ಮಾಡಿದ, ದೇಶದ ಪರಕೀಯ ಸಾಲವನ್ನು 1600 ಕೋಟಿ ರೂ. ಗಳಿಗೆ ಮುಟ್ಟಿಸಿದ. ಕ್ರಾಂತಿಯ ಪ್ರವಾಹ ಇನ್ನು ತನ್ನನ್ನು ಉಳಿಸುವುದಿಲ್ಲೆಂಬುದು ಮನವರಿಕೆಯಾದಾಗ ಸುಮಾರು 800 ಕೋಟಿ ರೂ.ಗಳನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಅಮೇರಿಕಕ್ಕೆ ಹೋದ. ಇದು ಆ ದೇಶದ ಎರಡು ವರ್ಷಗಳ ಒಟ್ಟು ನಿರ್ಯಾತಗಳ ಮೊತ್ತ ! ಕ್ರಾಂತಿಯ ಪ್ರವಾಹಕ್ಕೆ ಅಂಜಿ ತಮ್ಮ ಆಳಿಗಾಲ ಇನ್ನು ಬಹುದೂರ ಉಳಿದಿಲ್ಲೆಂದು ಅರಿತು ಕೈಗೆ ಸಿಕ್ಕ ಸಂಪತ್ತೆಲ್ಲವನ್ನೂ ಬಳಿದುಕೊಂಡು ಓಡಿಹೋದವರಲ್ಲಿ ಸೋಮೋಝಾ ಮೊದಲಿಗನೇನೂ ಅಲ್ಲ. ಇರಾನ್‌ನ ಶಹಾ ಮತ್ತು ಅದಕ್ಕೂ ಮೊದಲು 1959 ರಲ್ಲಿ ಕ್ಯೂಬಾದ ಸರ್ವಾಧಿಕಾರಿ ಬ್ಯಾಟಿಸ್ಟಾ ಅವರು ಮಾಡಿದ್ದನ್ನೇ ಸೋಮೋಜಾ ಮಾಡಿದ್ದು. ಈ ಮೂವರೂ ಆಶ್ರಯಕ್ಕೆ ಅಮೇರಿಕಕ್ಕೇ ಓಡಿಹೋದದ್ದು ಕಾಕತಾಳೀಯವೇನೂ ಅಲ್ಲ.

ಕೃಷಿ :

ಕ್ರಾಂತಿಯ ನಂತರ ಹೊಸ ಸರ್ಕಾರ ಕೈಗೊಂಡ ಮೊಟ್ಟ ಮೊದಲ ಕ್ರಮವೆಂದರೆ ಆಮೂಲಾಗ್ರವಾಗಿ ಜಮೀನಿನ ಮರುಹಂಚಿಕೆ. ಮೊದಲು ದೇಶದ ಒಟ್ಟು ಜಮೀನಿನ 40 ಪ್ರ. ಶ. ದಷ್ಟನ್ನು ಕೇವಲ ಸೋಮೋಜಾನ ಮನೆತನವೊಂದೇ ಹೊಂದಿದ್ದರೆ ಇನ್ನು 57 ಪ್ರ. ಶ. ಜಮೀನು ಶ್ರೀಮಂತ ರೈತರ ಒಡೆತನದಲ್ಲಿತ್ತು. ಹೊಸ ಸರಕಾರ ಸೋಮೋಜಾನ ಎಲ್ಲ ಜಮೀನನ್ನು ರಾಷ್ಟ್ರೀಕರಿಸಿ ಬಡರೈತರಿಗೆ ಹಂಚಿದರು. ಇಂದು ಸುಮಾರು 50 ಪ್ರ.ಶ. ಜಮೀನನ್ನು ಮೊದಲಿನ ಬಡರೈತರು ಖಾಸಗಿಯಾಗಿಯೂ ಮತ್ತು ಸಹಕಾರಿ ರೀತಿಯಲ್ಲೂ ಸಾಗುವಳಿ ನಡೆಸುತ್ತಿದ್ದಾರೆ. ಉಳಿದ 50 ಪ್ರ. ಶ. ಜಮೀನನ್ನು ಮಧ್ಯಮ ಮತ್ತು ಕೆಲ ದೊಡ್ಡ ರೈತರು ಹೊಂದಿದ್ದು ಅವರೂ ಕೂಡ ರಾಷ್ಟ್ರೀಯ ಕೃಷಿ ಯೋಜನೆಗೆ ಅನುಗುಣವಾಗಿಯೇ ಸಾಗುವಳಿ ನಡೆಸುತ್ತಾರೆ. ಈ ಧೋರಣೆಯಿಂದಾಗಿ ಮೊದಲ ವರ್ಷದಲ್ಲಿ ಕೃಷಿ ಉತ್ಪಾದನೆ 26ಪ್ರ ಶ. ದಷ್ಟೂ, ಎರಡನೇ ವರ್ಷದಲ್ಲಿ 12 ಪ್ರ. ಶ. ದಷ್ಟೂ ಹೆಚ್ಚಾಯಿತು. ದನಕರು ಸಾಕಣೆಯಲ್ಲಿ ಪರಿಸ್ಥಿತಿಯು ಹೆಚ್ಚು ಬಿಕ್ಕಟ್ಟಿನದಾಗಿದೆ. ಕ್ರಾಂತಿಗಿಂತ ಮೊದಲು ಸೋಮೋಜಿಸ್ಟರು ಪರದೇಶಗಳಿಗೆ ಮಾಂಸ ಮಾರುವುದಕ್ಕಾಗಿ ಒಳ್ಳೆಯ ತಳಿಯ ಸಹಸ್ರಾರು ದನಗಳನ್ನು ಕೊಂದು ಹಾಕಿದ್ದರಿಂದಾಗಿ ಅವುಗಳ ಸಂಖ್ಯೆ ತೀರ ಕಡಿಮೆಯಾಯಿತು. ಈಗ ನಿಧಾನವಾಗಿ ಪಶು ಸಂಗೋಪನೆಯ ಕಾರ್ಯವನ್ನು ಮತ್ತೆ ಎತ್ತಿಕೊಳ್ಳಲಾಗಿದ್ದು, 1981ರಲ್ಲಿ ಮಾಂಸ ನಿರ್ಯಾತದಲ್ಲಿ 20 ಕೋಟಿ ರೂಗಳಷ್ಟು ಹೆಚ್ಚಳವಾದರೆ, 1982 ರಲ್ಲಿ 32ಕೋಟಿ ರೂಗಳಷ್ಟು ಹೆಚ್ಚಳವಾಯಿತು.

ಶಿಕ್ಷಣ :

ನಿರಕ್ಷರತೆ ನಿವಾರಣೆಯ ಕಾರ್ಯವನ್ನು ಹೊಸ ಸರಕಾರ ಜನತೆಯ ಸಕ್ರಿಯ ಸಹಕಾರದೊಂದಿಗೆ ಯುದ್ಧ ಮಾದರಿಯ ಗಂಭೀರತೆ ಮತ್ತು ಆತುರತೆಯಿಂದ ಕೈಗೊಂಡಿದೆ. ಹಾಗೂ ಈ ನಿಟ್ಟಿನಲ್ಲಿ ಅದ್ಭುತ ಫಲಿತಾಂಶಗಳನ್ನು ದೊರಕಿಸಿದೆ. 1978ರಿಂದ 1982ರ ಅವಧಿಯಲ್ಲಿ ಬಾಲವಾಡಿಗಳ ಸಂಖ್ಯೆ 2600 ರಿಂದ 5200 ಕ್ಕೇರಿತು ; ಪ್ರಾಥಮಿಕ ಶಾಲೆಗಳು 2400 ರಿಂದ 5400 ಕ್ಕೇರಿದವು ; ಪ್ರಾಥಮಿಕ ಶಾಲೆಗಳಲ್ಲಿಯ ಮಕ್ಕಳ ನೋಂದಣಿ 379,000 ರಿಂದ 530,000 ರಷ್ಟು ಹೆಚ್ಚಾಯಿತು, ಮಾಧ್ಯಮಿಕ ಶಾಲೆಗಳಲ್ಲಿನ ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳ ನೋಂದಣಿ ಕ್ರಮವಾಗಿ 98,000ರಿಂದ 151, 000ಕ್ಕೂ ಮತ್ತು 17,000 ರಿಂದ 34, 000ಕ್ಕೂ ಏರಿದವು. ವಯಸ್ಕರ ಶಿಕ್ಷಣದ ಯೋಜನೆಯನ್ನು ವ್ಯಾಪಕವಾಗಿ ಕೈಗೆತ್ತಿಕೊಳ್ಳಲಾಯಿತು ಈ ಎಲ್ಲಾ ಪ್ರಯತ್ನಗಳಿಂದಾಗಿ ನಿರಕ್ಷರತೆಯ ಪ್ರಮಾಣವು 50 ಪ್ರ. ಶ. ದಿಂದ — ಕೆಲವು ದೂರದ ಹಳ್ಳಿ ಪ್ರದೇಶಗಳಲ್ಲಿ ಅದು 80 ಪ್ರ. ಶ. ದಷ್ಟೂ ಇತ್ತು — 12 ಪ್ರ. ಶ. ಕ್ಕಿಳಿದಿದೆ.

ಆರೋಗ್ಯ :

ಆರೋಗ್ಯ ಸೇವೆಗಳಲ್ಲಿ ನಿಕಾರಾಗುವಾ ಸಾಧಿಸಿದ ಪ್ರಗತಿಯನ್ನು ಅಂತರರಾಷ್ಟ್ರೀಯ ಆರೋಗ್ಯ ಸಂಸ್ಥೆ (World Health Organisation) ಕೂಡ ಮೆಚ್ಚಿಕೊಂಡಿದೆ. ಈ ನಾಲ್ಕು ವರ್ಷಗಳಲ್ಲಿ ಆಸ್ಪತ್ರೆಗಳು ಮತ್ತು ಪ್ರಥಮ ಚಿಕಿತ್ಸೆ ಕೇಂದ್ರಗಳು 209ರಿಂದ 486 ಕ್ಕೇರಿವೆ ; ಡಾಕ್ಟರುಗಳ ಭೇಟಿಗಳು 160 ಪ್ರ. ಶ. ದಷ್ಟು ಮತ್ತು ದಂತವೈದ್ಯರ ಭೇಟಿಗಳು 105 ಪ್ರ. ಶ. ದಷ್ಟು ಏರಿವೆ, ಖಾಸಗೀ ಡಾಕ್ಟರುಗಳು ಮೊದಲು ರೋಗಿಗಳ ಕಡೆಯಿಂದ ಭಾರಿ ಹಣ ಕೇಳುವುದರ ಮೇಲೆ ಸರಕಾರ ಗಣನೀಯ ನಿಯಂತ್ರಣ ತಂದಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರೋಧ

ಮೇಲೆ ಕೊಟ್ಟ ಅಂಕಿಅಂಶಗಳು ಕ್ರಾಂತಿಯ ನಂತರ ನಿಕಾರಾಗುವ ಸಮಾಜದಲ್ಲಿ ಮನುಷ್ಯನ ಕಲ್ಯಾಣಕ್ಕೆ ಕೊಡಲಾಗುವ ಮಹತ್ವವನ್ನು ಎತ್ತಿ ತೋರಿಸುವ ಕೆಲವು ಸೂಚ್ಯಾಂಕಗಳು ಮಾತ್ರ. ತುಂಬಾ ಹಾನಿಕಾರಕವಾದ ಸಶಸ್ತ್ರ ಅಂತರ್ಯುದ್ಧವಾಗಿರದಿದ್ದರೆ, ಪ್ರತಿಕ್ರಾಂತಿಕಾರಿಗಳ ಪಿತೂರಿ ಇಲ್ಲವಾಗಿದ್ದರೆ ಮತ್ತು ಸಾಮ್ರಾಜ್ಯಶಾಹಿಗಳು ಸಾರಿದ ಸರ್ವತೋಮುಖ ವಿರೋಧವಿರದಿದ್ದರೆ ಕ್ರಾಂತಿಯ ಫಲಗಳು ಇನ್ನೂ ಅತಿ ದೊಡ್ಡ ಪ್ರಮಾಣದಲ್ಲಿ ಹೆಚ್ಚಿರುತ್ತಿದ್ದವು. ಹೊಸ ಸರಕಾರಕ್ಕೆ ತಾನು ಎಲ್ಲ ರೀತಿಯಿಂದ ಉಪಟಳ ಕೊಡುವುದಷ್ಟೇ ಅಲ್ಲ, ರೀಗನ್ ಆಡಳಿತವು ಇತರ ದೇಶಗಳಿಗೂ ಮತ್ತು ಜಾಗತಿಕ ಸಾಲ ಸಂಸ್ಥೆಗಳಿಗೂ ಕೂಡ ನಿಕಾರಾಗುವಾಗೆ ಯಾವ ರೀತಿಯ ನೆರವನ್ನು ನೀಡದಿರಲು ಒತ್ತಾಯಿಸುತ್ತಿದೆ. ಇಂಟರ್ ಅಮೇರಿಕನ ಡೆವೆಲಪ್‌ಮೆಂಟ್ ಬ್ಯಾಂಕ್ ನಿಕಾರಾಗುವಾದಲ್ಲಿ ಕೃಷಿ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ 50 ಲಕ್ಷ ರೂ.ಗಳ ಯೋಜನೆ ಹಾಕಿಕೊಂಡದ್ದಕ್ಕೆ ಅಮೇರಿಕ ವ್ಹಿಟೋ ಅಧಿಕಾರ ಬಳಸಿ ತಡೆ ಹಾಕಿತು. ಜಾಗತಿಕ ಬ್ಯಾಂಕು ಮೊದಲು ಒಪ್ಪಿಕೊಂಡಿದ್ದ ಸಾಲದ ಯೋಜನೆಯೊಂದನ್ನು ಏಕಪಕ್ಷೀಯವಾಗಿ ಸ್ಥಗಿತಗೊಳಿಸಿತು. ನಿಕಾರಾಗುವದಿಂದ ಮಾಂಸ ಆಯಾತವನ್ನು ಕಡಿತಗೊಳಿಸಲು ಅಮೇರಿಕ ಬೆದರಿಗೆ ಹಾಕಿತು. ಸ್ಟ್ಯಾಂಡರ್ಡ್ ಫ್ರುಟ್ ಕಂಪನಿಯು ಮೊದಲು 1985ರ ವರೆಗೆ ನಿಕಾರಾಗುವದ ಬಾಳೆಹಣ್ಣುಗಳನ್ನು ಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದರೂ ರೀಗನ್ ಸರ್ಕಾರದ ಒತ್ತಡದಿಂದಾಗಿ ಒಪ್ಪಂದವನ್ನು ಮುರಿದುಕೊಂಡಿತು. ಅಷ್ಟೇ ಅಲ್ಲ, ಅಮೇರಿಕವು ನಿಕಾರಾಗುವಾದಿಂದ ಸಕ್ಕರೆ ಖರೀದಿಯನ್ನು ಮೇ 1983 ರಲ್ಲಿ 90 ಪ್ರ. ಶ. ದಷ್ಟು ಕಡಿತಗೊಳಿಸಿತು. ಈಗ ಇಡೀ ದೇಶದ ಸುತ್ತ ನೌಕಾ ದಿಗ್ಬಂಧದ ಕುರಿತು ರೀಗನ್ ಸರಕಾರ ಯೋಚಿಸುತ್ತಿದೆ.

ಅಮೇರಿಕ ನಿಕಾರಾಗುವಾದ ಮೇಲೆ ಈ ತರಹದ ವಿರೋಧದೃಷ್ಟಿ ಇಟ್ಟಿರುವುದು ಏಕೆ ? ಇಂದು ಅಮೇರಿಕಾದ ಸಾಮ್ರಾಜ್ಯಶಾಹಿ ಹಾಗೂ ನವ ವಸಾಹತುವಾದಿ ಧೋರಣೆಗಳಿಗೆ ಎಲ್ ಸಾಲ್ವಡೋರ್, ಫಿಲಿಪೈನ್ಸ್, ಗ್ವಾಟೇಮಾಲಾ, ಮುಂತಾದ ಹಲವು ದೇಶಗಳಲ್ಲಿ ತೀವ್ರ ವಿರೋಧ ಸಂಘಟಿತಗೊಳ್ಳುತ್ತಿದೆ. ಈ ಹಿಂದೆ ಹಲವು ದೇಶಗಳ ಜನತೆ ಈ ಧೋರಣೆಗಳ ವಿರುದ್ಧವಾಗಿ ಬಂಡೆದ್ದು ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮತ್ತು ತಮಗೆ ಸರಿಕಂಡ ಸಾಮಾಜಿಕ ಆರ್ಥಿಕ ವ್ಯವಸ್ಥೆಗಾಗಿ ಯಶಸ್ವಿಯಾಗಿ ಹೋರಾಟ ನಡೆಸಿದ್ದಾರೆ. ಕ್ಯೂಬಾ, ವಿಯಟ್ನಾಂ, ಕಂಪೂಚಿಯ, ಜಿಂಬಾಬ್ವೆ ಇವು ಇದಕ್ಕೆ ಕೆಲ ಉದಾಹರಣೆಗಳು. ಆದರೆ ಸಂಕಟಗ್ರಸ್ತ ಅಮೇರಿಕನ್ ಸಾಮ್ರಾಜ್ಯಶಾಹಿಯ ದೃಷ್ಟಿಯಲ್ಲಿ ಮಾತ್ರ ಮೂರನೆಯ ಜಗತ್ತಿನ ಹಲವೆಡೆಗಳಲ್ಲಿ ಸ್ವಾತಂತ್ರಪ್ರೇಮಿ ಜನತೆ ತಮ್ಮ ಹಕ್ಕಿಗಾಗಿ ಹೋರಾಡುವುದು ಸೋವಿಯತ್ ಯೂನಿಯನ್ನಿನ ಪ್ರಚೋದನೆಯಿಂದಾಗಿ ಎಂದು ಭಾವಿಸಿದೆ. ಕೇಂದ್ರ ಅಮೇರಿಕದಲ್ಲಿ ಹಾಗೂ ಒಟ್ಟು ಲ್ಯಾಟಿನ್ ಅಮೇರಿಕದಲ್ಲಿ ರಾಜಕೀಯ ಬಿಕ್ಕಟ್ಟು ಇಂದು ದಿನದಿನಕ್ಕೂ ತೀವ್ರಗೊಳ್ಳುತ್ತಿರುವಾಗ ಪ್ರತಿಯೊಂದು ದೇಶದ ಸಾಮ್ರಾಜ್ಯಶಾಹಿ ವಿರೋಧದ ಹೋರಾಟದ ಹಿಂದೆ ಅಮೇರಿಕ ಸೋವಿಯಟ್ ಕೈವಾಡವನ್ನು ಕಾಣುತ್ತಿದೆ. ಸೋವಿಯತ್ ಯುನಿಯನ್ ತನ್ನ "ಉಪಗ್ರಹ" ಕ್ಯೂಬಾವನ್ನು ಬಳಸಿ ಆ ಪ್ರದೇಶದಲ್ಲಿ ಕಮ್ಯುನಿಸಂ ಬೆಳೆಸುತ್ತಿದೆ ಎಂದು ಅದರ ಭಯ. ನಿಕಾರಾಗುವಾದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ಕ್ಯೂಬದ ಕೈವಾಡದ ಬಗ್ಗೆ ಅಮೇರಿಕ ಗುಲ್ಲೆಬ್ಬಿಸಿತ್ತು, ಇಂದು ಎಲ್ ಸಾಲ್ವಾಡೋರ್ ಮತ್ತು ಗ್ವಾಟೇಮಾಲಾಗಳಲ್ಲಿಯೂ ತೀವ್ರತರವಾದ ಸಶಸ್ತ್ರ ಹೋರಾಟ ನಡೆಯುತ್ತಿರುವಾಗ ಅವುಗಳಿಗೆ ಸೋವಿಯತ್ ಯೂನಿಯನ್ ಮತ್ತು ನಿಕಾರಾಗುವಾಗಳ ಮೂಲಕ ಕ್ಯೂಬಾ ಶಸ್ತ್ರಾಸ್ತ್ರ ಪೂರೈಸುತ್ತಿದೆ ಎಂದು ಅಮೇರಿಕದ ಚೀರಾಟ. ಕ್ಯೂಬಾ ಮತ್ತು ನಿಕರಾಗುವಾಗಳ ಮೂಲಕ ಕೆಲ ಪ್ರಮಾಣದಲ್ಲಿ ಎಲ್ ಸಾಲ್ವಾಡೋರ್ ಮುಂತಾಡೆಗಳಲ್ಲಿಯ ಕ್ರಾಂತಿಕಾರಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ ನಡೆದಿರಲೂಬಹುದು. ಆದರೆ ಅಮೇರಿಕವೇ ಅದೆಷ್ಟೋ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿಯ ಜನವಿರೋಧಿ ಸರಕಾರಗಳಿಗೆ ಶಸ್ತ್ರಾಸ್ತ್ರ ಮತ್ತಿತರ ನೆರವು ನೀಡುತ್ತಿದೆ. ಇಲ್ಲಿ ಮುಖ್ಯ ಪ್ರಶ್ನೆ : ಯಾರು ಯಾರಿಗೆ ಶಸ್ತ್ರಾಸ್ತ್ರ ಪೂರೈಸುತ್ತಿದ್ದಾರೆಂಬುದು.

ನಿಕರಾಗುವಾದ ಕ್ರಾಂತಿ ಯಶಸ್ವಿಯಾದ ನಂತರ ಮಧ್ಯ ಅಮೇರಿಕದಲ್ಲಿ ಎರಡನೇ ಕ್ಯೂಬಾ ಹುಟ್ಟಿಕೊಂಡಿದೆ ಎಂಬ ಸಾಮ್ರಾಜ್ಯಶಾಹಿಗಳ ಪ್ರಚಾರಕ್ಕೆ ಉತ್ತರವಾಗಿ ಕ್ಯೂಬಾದ ಅಧ್ಯಕ್ಷ ಫೀಡೆಲ್ ಕ್ಯಾಸ್ಟ್ರೋ ಕೊಟ್ಟ ಹೇಳಿಕೆ ತುಂಬಾ ಅರ್ಥಪೂರ್ಣವಾಗಿದೆ. ಕ್ರಾಂತಿಯ ನಂತರ ಹೊಸ ಸರಕಾರದ ಆಮಂತ್ರಣದ ಮೇರೆಗೆ ಮೊದಲ ಬಾರಿ ಕ್ಯಾಸ್ಟ್ರೋ ನಿಕರಾಗುವಾಕ್ಕೆ ಹೋದಾಗ ಮನಾಗುವಾದ ವಿಮಾನ ನಿಲ್ದಾಣದಲ್ಲಿ ಕಾಲಿಡುತ್ತಲೇ ಹೇಳಿದರು : "ಕ್ರಾಂತಿಯ ನಂತರದ ನಿಕರಾಗುವಾ ಎರಡನೆ ಕ್ಯೂಬಾ ಆಗಿದೆ ಎನ್ನುವುದು ತಪ್ಪು. ಅದು ಎರಡನೆ, ಅಂದರೆ ಹೊಸ ನಿಕರಾಗುವಾ ಆಗಿದೆ !"

(ಆಧಾರ : ಪೀಪಲ್ಸ್ ಡೆಮಾಕ್ರಸಿ)

ಯೋಜನೆಗಳು ಕೈಗೂಡಬೇಕಾದರೆ ?

-ಎನ್. ಕೆ. ಉಪಾಧ್ಯಾಯ

ಒಂದು ಸಾವಿರ ಕೋಟಿ ರೂ. ಖರ್ಚಿನಿಂದ 70,000 ಹೆಕ್ಟಾರ್ ಕ್ಷೇತ್ರಕ್ಕೆ ನಿರುಣಿಸುವ ಬೃಹತ್ ಯೋಜನೆಯೊಂದನ್ನು ಕರ್ನಾಟಕದ ಜನತಾ ಸರಕಾರ ತಯಾರಿಸಿದೆ ಎಂದು ಲೋಕೋಪಯೋಗಿ ಇಲಾಕೆಯ ಮಂತ್ರಿ ದೇವೇಗೌಡರು ಆಗಸ್ಟ್ 29 ರಂದು ವಿಧಾನ ಸಭೆಯಲ್ಲಿ ಘೋಷಿಸಿದರು. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೂಳ್ಳಬೇಕಾದ ಮಹಾಕಾರ್ಯವಿದು. ಆರನೇಯೋಜನೆಯ ಇನ್ನೂ ಒಂದೂವರೆ ವರ್ಷ ಕಳೆಯಬೇಕಾಗಿದೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಈ ಯೋಜನೆ ಕಾರ್ಯರೂಪದಲ್ಲಿ ಬರಲು ಆರೂವರೆ ವರ್ಷಬೇಕಾಗುತ್ತದೆಂಬುದನ್ನು ಗಮನಿಸಬೇಕಾಗಿದೆ.

ನೀರಿನ ಲಭ್ಯತೆ.

ಕರ್ನಾಟಕ ರಾಜ್ಯದಲ್ಲಿ ನೀರಾವರಿಗಾಗಿ 1600 ಘನ್‌ಫೂಟ್ ನೀರು ಲಭ್ಯವಿದೆಂದೂ ಅದರ ಪೈಕಿ 617 ಘನ್ ಅಡಿಯಷ್ಟೇ ಉಪಯೋಗಿಸಲು ಸಾಧ್ಯವಾಗಿದೆಂದು ಇದಕ್ಕಾಗಿ ಯೋಜನೆಯಲ್ಲಿ ರೂ 715 ಕೋಟಿಯನ್ನು ರೂ. 245.49 ಕೋಟಿಯನ್ನು ಯೋಜನೇತರ ಯೋಜನೆಗಳಲ್ಲಿಯೂ ಖರ್ಚು ಮಾಡಲಾಗಿದೆಂದೂ ಮಂತ್ರಿಯವರು ಜಾಹೀರಪಡಿಸಿದ್ದಾರೆ. ಚಿಕ್ಕ ನೀರಾವರಿ ಯೋಜನೆಗಾಗಿ ರೂ, 173 ಕೋಟಿ ಖರ್ಚಾಗಿದೆಂದೂ. ಈ ರೀತಿ ನೀರಾವರಿ ಯೋಜನೆ ಗಳಿಗಾಗಿ ಒಟ್ಟು 1133,49 ಕೋಟಿ ಖರ್ಚುಮಾಡಲಾಗಿದೆಂಬ ಮಾಹಿತಿ ನೀಡಿದ್ದಾರೆ. ಈಗ ಕೈಗೊಂಡಿರುವ ಯೋಜನೆಗಳಿಗೆ ಮಾಡುವ ರೂ. 1200 ಕೋಟಿ ಖರ್ಚಿನಿಂದ 449 ಘನ್ ಅಡಿ ಹೆಚ್ಚುವರಿ ನೀರು ಪಡೆಯಬಹುದೆಂದೂ, ಸರಕಾರ ರೂ 2000 ಕೋಟಿ ಖರ್ಚುಮಾಡಲು ತಯಾರಿದ್ದರೆ ಬಾಕಿ ಉಳಿದ 326 ಘನ್ ಅಡಿ ನೀರನ್ನು ಉಪಯೋಗಿಸಲು ಸಾಧ್ಯವಿದೆಂದೂ ಹೇಳಿದ್ದಾರೆ.

ಕೃಷ್ಣರಾಜಸಾಗರದ ಕಾಲುವೆಯ ಆಧುನೀಕರಣಕ್ಕೆ ರೂ. 50 ಕೋಟಿ, ಭದ್ರಾ ಮತ್ತು ತುಂಗಾ ಯೋಜನೆಗೆ ರೂ. 60 ಕೋಟಿ ಮತ್ತು ರೂ. 15 ಕೋಟಿ ಹೆಚ್ಚಿನ ಹಣ ಬೇಕಾಗಿದೆ. ತುಂಗಭದ್ರದ ಎಡ ಮತ್ತು ಬಲ ದಂಡೆ ಕಾಲುವೆಗಳಿಂದ ಕ್ರಮವಾಗಿ 1,43000 ಎಕ್ರೆ ಹಾಗೂ 1,44,500 ಎಕ್ರೆ ಭೂಮಿಗೆ ನೀರುಣಿಸಲಾಗುತ್ತಿದೆ. ಯೋಗ್ಯ ಕ್ರಮ ಕೈಗೊಂಡರೆ ಈ ಎರಡು ನಾಲೆಗಳಿಂದ 6 ಲಕ್ಷ ಎಕರೆಗೆ ನೀರುಣಿಸುವುದು ಅಸಾಧ್ಯವೇನಲ್ಲ.

ಬೀದರ ಜಿಲ್ಲೆಯ ಕಾರಂಜ, ಗುಲ್ಬರ್ಗದ ಬೆಣ್ಣೆ ತೊರಾ ಯೋಜನೆಗಳಿಗೂ ಹೆಚ್ಚು ಹಣ ಕೊಡಮಾಡಲಾಗುವುದು. ಹೇಮಾವತಿ ಯೋಜನೆಗಾಗಿ ರೂ. 100 ಕೋಟಿ ಬಿಡುಗಡೆ ಮಾಡಲಾಗುವುದು. ಅತಿ ದೊಡ್ಡ ಯೋಜನೆಗಳಲ್ಲೊಂದಾದ ಆಲಮಟ್ಟಿ ಯೋಜನೆಗೆ ರೂ. 50 ಕೋಟಿಗಿಂತಲೂ ಹೆಚ್ಚು ಹಣಒದಗಿಸಿ 69 ಕಿ. ಮೀಟರ್ ಉದ್ದದ ಕಾಲುವೆಯನ್ನು ಮುಗಿಸಿ 1984 ಜೂನ್ ತಿಂಗಳೊಳಗಾಗಿ ನೀರು ಪೂರೈಸಲಾಗುವುದೆಂದು ಹೇಳಲಾಗಿದೆ.

ದೇವೇಗೌಡರ ಈ ಹೇಳಿಕೆಯನ್ನು ಕೇಳಿದ-ಓದಿದವರಿಂದ "ಎಂಥಮಂತ್ರಿ, ಎಂಥ ಸರಕಾರ ನೋಡಿ ; ಎಷ್ಟು ಆಸೆಯಿಂದ ನೀರಾವರಿ ಕಾರ್ಯಗಳನ್ನು ಕೈಗತಗೊಳಿಸಲು ದುಡಿಯುತ್ತಿದ್ದಾರೆ ನಮ್ಮ ಮಂತ್ರಿ ಮಹಾಶಯರು" ಎಂಬ ಉದ್ಗಾರ ಹೊರಬಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ನಮ್ಮಂಥವರು ಮಾತ್ರ "ಆದರೆ" ಎಂಬ ಪ್ರಶ್ನೆ ಹಾಕುತ್ತೇವೆ. ಯಾಕೆ ಗೊತ್ತೇ ?

ಯೋಜನೆಗಳ ಕಾರ್ಯ

ಚುನಾವಣೆ ಕಾಲದಲ್ಲಿ ಮಾತು ಕೊಟ್ಟಿದ್ದೇನೆ. ಆ ಯೋಜನೆ ಆಗಲೇಬೇಕೆಂದು ರಾಜಕೀಯ ಒತ್ತಡ ತಂದು ಯೋಜನೆ ಪ್ರಾರಂಭಿಸುವಂತೆ ಸರಕಾರದ ಮೇಲೆ ಒತ್ತಾಯ ತರುವ ಪರಿಪಾಠ ಭಾರತದಲ್ಲಿ ಅನುಸರಿಸುವ ಯೋಜನಾ ನೀತಿ; ಅಂಥ ಯೋಜನೆಗಳು ರಾಜಕೀಯ ಒತ್ತಡದಿಂದಾಗಿ ಬೇರೆ ಬೇರೆ ರೂಪ ತಳೆದಿರುವುದನ್ನು ನೋಡಿದ್ದೇವೆ. ಕೃಷ್ಣಾ ನದಿಗೆ ಕಟ್ಟುವ ಆಲಮಟ್ಟಿ, ಭದ್ರಾ ಹಾರಂಗಿ, ಹೇಮಾವತಿ ಯೋಜನೆಗಳೆಲ್ಲ ಇದಕ್ಕೆ ಸಾಕ್ಷಿ. ಸ್ವಹಿತ ಸಾಧನೆಗಳೇ ಇದಕ್ಕೆಲ್ಲ ಕಾರಣ.

ಪ್ರತಿಯೊಂದು ಪಂಚವಾರ್ಷಿಕ ಯೋಜನೆ ತಯಾರಿಸುವಾಗ ಕರ್ನಾಟಕ ರಾಜ್ಯದ ಸಮಗ್ರ ದೃಷ್ಟಿಕೋಣ ಇರಬೇಕು. ಅತ್ಯಂತ ಹಿಂದುಳಿದ, ಸದಾಕಾಲ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಗಳಿಗೆ ಪ್ರಾಶಸ್ತ್ಯ ನೀಡಬೇಕು. ನೀರಾವರಿಯ ಸೌಲಭ್ಯ ಒದಗಿಸುವಾಗ ವಿದ್ಯುಚ್ಛಕ್ತಿ ಉತ್ಪಾದನೆಯ ಅವಕಾಶವನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅಂಥ ಯೋಜನೆಗಳಿಂದ ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರು ಒದಗಿಸುವ ಸಾಧ್ಯತೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಇದರಲ್ಲಿ ಅಲ್ಪಕಾಲೀನ, ದೀರ್ಘಕಾಲೀನ ಯೋಜನೆಗಳನ್ನು ಪ್ರತ್ಯೇಕಿಸಬೇಕು. ದೇಶದ - ರಾಜ್ಯದ ಸರ್ವಾಂಗೀಣ ಅಭಿವೃದ್ಧಿ, ಹೆಚ್ಚು ಪ್ರದೇಶದ ಒಕ್ಕಲತನಕ್ಕೆ, ಕುಡಿಯುವ ನೀರಿಗೆ ಯೋಗ್ಯವಾದ ಯೋಜನೆಗಳಾವುವೆಂಬುದನ್ನು ಪರಿಗಣಿಸಬೇಕಲ್ಲದೆ ಮುಳುಗಡೆಯಾಗುವ ಪ್ರದೇಶವನ್ನಷ್ಟೇ ಗಮನದಲ್ಲಿಡುವುದು ಸರಿಯಲ್ಲ.

ಈ ಯೋಜನೆಗಳಿಗೆ ಸಂಪನ್ಮೂಲ ಒದಗಿಸುವ ಸಾಧ್ಯತೆ ಮುಖ್ಯವಾದುದು ರಾಜ್ಯ ಒದಗಿಸಬಹುದಾದ ಹಣ, ಕೇಂದ್ರದ ಧನ ಸಹಾಯ, ವಿದೇಶಿ ಧನ ಸಹಾಯ, ಸಾಲ ಎತ್ತುವ ಸಾಧ್ಯತೆಗಳನ್ನೆಲ್ಲ ಚಾಕಚಕ್ಯತೆಯಿಂದ ಆಲೋಚಿಸಬೇಕು.

ಈ ಯೋಜನೆಗಳಿಗೆ ಸಂಪನ್ಮೂಲ ಒದಗಿಸುವ ಸಾಧ್ಯವಾದುದು. ರಾಜ್ಯ ರಾಜ್ಯ ಒದಗಿಸಬೇಕಾದ ಹಣ, ಕೇಂದ್ರದ ಧನಸಹಾಯ, ವಿದೇಶಿ ಧನ ಸಹಾಯ, ಸಾಲ ಎತ್ತುವ ಸಾಧ್ಯತೆಗಳನ್ನೆಲ್ಲ ಚಾಕಚಕ್ಯತೆಯಿಂದ ಆಲೋಚಿಸಬೇಕು.

ಈ ಯೋಜನೆಗಳ ಕಾರ್ಯ ಪ್ರಾರಂಭಿಸುವಾಗ ಕಂಟ್ರಾಕ್ಟರ್, ಅಧಿಕಾರಿಗಳು, ನೌಕರರ ಕಾರ್ಯ ಪದ್ಧತಿ, ನಿಪುಣತೆ, ಗುಣ, ನಡೆತೆಗಳೂ ಗಮನದಲ್ಲಿರಬೇಕಾಗಿದೆ.

ಹಿಂದಿನ ಕಾಲದಲ್ಲಿ ಮೈಸೂರು ಸಂಸ್ಥಾನ ಇದ್ದಾಗ ಸರ್. ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್‌ರಂಥವರು ಇದ್ದುದರಿಂದಲೇ, ಇಂದಿನ ಕರ್ನಾಟಕ ರಾಜ್ಯದಲ್ಲಿ ನಾವು ಕಾಣುತ್ತಿರುವ ವಿದ್ಯುಚ್ಛಕ್ತಿ, ನೀರಾವರಿ ಯೋಜನೆಗಳಾದವು. ಕರ್ನಾಟಕ ರಾಜ್ಯ ರಚನೆಯಾಗಿ ಕಾಂಗ್ರೆಸ್ ಆಡಳಿತ ಬಂದಂದಿನಿಂದ ಎದ್ದು ಕಾಣುವಂಥ ಯೋಜನೆಗಳು ವಿರಳ. ಇದಕ್ಕೆಲ್ಲ ಕಾಂಗ್ರೆಸ್ ರಾಜಕೀಯವೇ ಮುಖ್ಯ ಕಾರಣ. ರಾಜ್ಯದ ಅಭಿವೃದ್ಧಿಯೇ ಮುಖ್ಯ ಗುರಿಯನ್ನಾಗಿಟ್ಟುಕೊಂಡಿದ್ದಾಗಿದ್ದರೆ ಈಗಾಗಲೇ ಕೈಗೆತ್ತಿಕೊಂಡಿರುವ ಹೋಜನೆಗಳೆಲ್ಲ ಇಷ್ಟೊತ್ತಿಗೆ ಪೂರ್ಣಗೊಳ್ಳಬಹುದಾಗಿತ್ತು. ಆದರಿಂದಾಗಿ ರಾಜ್ಯದ ಹೆಚ್ಚಿನ ನೀರಾವರಿ, ವಿದ್ಯುಚ್ಛಕ್ತಿ ಅವಶ್ಯಕತೆಗಳನ್ನು ಪೂರೈಸಬಹುದಿತ್ತು. ಆದರೆ ಪ್ರಾದೇಶಿಕ ಮನೋಭಾವನೆ ಪ್ರಾಧಾನ್ಯತೆ ಪಡೆದಾಗ ವಿಶಾಲ ರಾಜ್ಯ, ರಾಷ್ಟ್ರದ ಭಾವನೆಗಳೆಲ್ಲ ಅಳಿಸಿ ಹೋಗುತ್ತವೆ. ಹಾರಂಗಿ, ಹೇಮಾವತಿ, ಆಲಮಟ್ಟಿ ಯೋಜನೆಗಳೆಲ್ಲಇದಕ್ಕೆ ಸಾಕ್ಷಿಯಾಗಿದೆ.

ಬ್ರಿಟಿಷ್ ಆಡಳಿತೆಯಲ್ಲಿದ್ದಾಗಲೇ ಮೂರು ರಾಜ್ಯಗಳಲ್ಲಿ ಹರಿಯುತ್ತಿರುವ ಕೃಷ್ಣಾ ನದಿಗೆ, ಕೊಯಿನಾ, ಭಾಯಾ, ಆಲಮಟ್ಟಿ, ಶ್ರೀಶೈಲ, ನಾಗಾರ್ಜುನ ಸಾಗರ ಅಣೆಕಟ್ಟುಗಳ ಯೋಜನೆ ತಯಾರಿಸಲಾಗಿತ್ತು. ಸ್ವಾತಂತ್ರ್ಯ ಪಡೆದ ನಂತರ ಆಂಧ್ರ ಸರಕಾರ ನಾಗಾರ್ಜುನ ಸಾಗರ, ಶ್ರೀಶೈಲ ಯೋಜನೆಗಳನ್ನು ಪೂರ್ಣಗೊಳಿಸಿದೆ. ಮಹಾರಾಷ್ಟ್ರ ಸರಕಾರ ಕೊಯಿನಾ ಯೋಜನೆಯನ್ನು ಮುಗಿಸಿ, ವಿದ್ಯುಚ್ಛಕ್ತಿ ಮತ್ತು ನೀರನ್ನು ಉಪಯೋಗಿಸುತ್ತಿದೆ. ಕರ್ನಾಟಕ ಸರಕಾರ ಆಲಮಟ್ಟಿ ಯೋಜನೆಯ ಕುರಿತು ನಿರ್ದಿಷ್ಟ, ದೃಢ ನಿಲುವು ತಾಳಲಿಲ್ಲ. ನಿಜಲಿಂಗಪ್ಪನವರು ಮುಖ್ಯಮಂತ್ರಿಯವರಿದ್ದಾಗ ಪ್ರಾರಂಭವಾಗಿ ರಾಮಕೃಷ್ಣ ಹೆಗಡೆ ಸರಕಾರ ಅಧಿಕಾರಕ್ಕೆ ಬರುವ ತನಕ, ಬಾಗಲಕೋಟೆ ನಗರ ಮುಳುಗಡೆಯ ಭೂತವನ್ನೇ ಮುಂದೆ ಮಾಡಿ ಈ ಮಹಾಯೋಜನೆಯನ್ನು ನಿರ್ಲಕ್ಷಿಸಲಾಯಿತು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ಬಾಗಲಕೋಟೆ ಮುಳುಗಡೆಯ ನೆವದಿಂದಾಗಿ ಆಲಮಟ್ಟಿ ಯೋಜನೆ ಕುಂಠಿತಗೊಳಿಸಿ, ತಾಸು ಗುಲ್ಬರ್ಗ ಪ್ರದೇಶದಿಂದ ಆರಿಸಿ ಬಂದಿರುವುದರಿಂದ ತಾನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆಂಬುದನ್ನು ಮರೆತು, ಗುಲ್ಬರ್ಗ ಜಿಲ್ಲೆಯ ಶಹಾಪುರ, ಶೋರಾಪುರ ಜಿಲ್ಲೆಗಳಿಗೆ ನೀರಾವರಿ ಒದಗಿಸುವ ದೃಷ್ಟಿಯಿಂದ ನಾರಾಯಣಪುರ ಅಣೆಕಟ್ಟೆಗೆ ಪ್ರಾಶಸ್ತ್ಯ ನೀಡಿದ್ದರು. ನಾರಾಯಣಪುರ ಅಣೆಕಟ್ಟು 3 ವರ್ಷಗಳ ಹಿಂದೆಯೇ ಪೂರ್ಣಗೊಳ್ಳಬೇಕಾಗಿತ್ತು. ಆಧರೆ ಹೋದ ವರ್ಷ ಅದು ಪೂರ್ಣಗೊಂಡರೂ ಕೂಡ ಯೋಜನೆಯನ್ನು ಕಾರ್ಯರೂಪದಲ್ಲಿಳಿಸುವಲ್ಲಿ ಸರಿಯಾದ ದೃಷ್ಟಿಕೋನ ಇಲ್ಲದಿರುವುದರಿಂದ, ಭೂಮಿ ಸರಿಪಡಿಸುವ, ಕಾಲುವೆ ತೋಡುವ — ಕೆಲಸಗಳನ್ನು ಮಾಡದಿದ್ದ ಕಾರಣದಿಂದಾಗಿ, ಅಣೆಕಟ್ಟೆನಲ್ಲಿ ಶೇಖರಿಸಿಟ್ಟ ನೀರನ್ನು ರೈತರಿಗೆ ಪೂರೈಸಲು ಸಾಧ್ಯವಾಗಲಿಲ್ಲ. ಮುಂದಿನ ವರ್ಷ ನೀರು ಬಿಡಲಾಗುವುದೆಂದು ದೇವೇಗೌಡರು ಸಾರಿದ್ದಾರೆ.

ಆಂಧ್ರ — ಮಹಾರಾಷ್ಟ್ರಗಳು ತಂತಮ್ಮ ಯೋಜನೆಗಳನ್ನು ಪೂರ್ತಿಗೊಳಿಸುತ್ತಿದ್ದಾಗಲೂ, ಕರ್ನಾಟಕ ಸರ್ಕಾರ ಆಲಮಟ್ಟಿ ಯೋಜನೆಯ ಕುರಿತು ಯೋಚಿಸಲೂ ತಯಾರಿರಲಿಲ್ಲ. 1964ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ವಿಶಾಲ ತಳಹದಿಯ ಸತ್ಯಾಗ್ರಹ ಕೈಗೊಂಡಾಗ ಕೆಲಸ ಪ್ರಾರಂಭಿಸಲಾಯಿತು. ಅಂದಿನ ರೂ. 50 ಕೋಟಿಯ ಅಂದಾಜು ಇಂದು ರೂ. 1200 ಆಗಿದೆಂಬುದನ್ನು ಸರಕಾರವೇ ಒಪ್ಪಿಕೊಂಡಿದೆ.

ಹೇಮಾವತಿ — ಹಾರಂಗಿ ಯೋಜನೆಗಳಿಗಾಗಿಯೂ ಅಂದಿನ ಕಮ್ಯುನಿಸ್ಟ್ ಪಾರ್ಟಿ ಒತ್ತಾಯ ಪಡಿಸುತ್ತಲೇ ಬಂದಿತ್ತು. ಇವುಗಳ ಪರಿಸ್ಥಿತಿ ಕಣ್ಣೆದುರಿಗಿದೆ.

ರಾಜ್ಯಗಳ ಸಂಪನ್ಮೂಲಗಳನ್ನೆಲ್ಲ ದೋಚಿಕೊಂಡು ಹೋಗುವ ಕೇಂದ್ರ ಸರಕಾರ ಕರ್ನಾಟಕದ ಈ ಯೋಜನೆಗಳಿಗೆ ಬರೀ ರೂ, 80 ಕೋಟಿ ಕೊಡಮಾಡಿದೆಂದು ದೇವೇಗೌಡರು ಹೇಳಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಕೇಂದ್ರ ಸರಕಾರದಿಂದ ಒಂದು ಪೈಸಾ ಕೂಡ ಬಂದಿಲ್ಲೆಂದು ಮಂತ್ರಿ ಪಟೇಲರು ಹೇಳಿದ್ದಾರೆ. ಆದ್ದರಿಂದ ಸಂಪನ್ಮೂಲಗಳ ಲಭ್ಯತೆಯ ಸ್ಪಷ್ಟ ಚಿತ್ರ ರಾಜ್ಯ ಸರಕಾರಕ್ಕಿರುವುದು ಅತ್ಯಗತ್ಯ. ಇಲ್ಲವಾದರೆ ಯಾವ ಯೋಜನೆಯೂ ಪೂರ್ಣಗೊಳ್ಳಲು ಸಾಧ್ಯವಿಲ್ಲ. ಹಾಗಾದ್ದಲ್ಲಿ ಯೋಜನೆಗಳಿಗಾಗಿ ಖರ್ಚು ಮಾಡುವ ಹಣದಿಂದ ಯಾವ ಪ್ರತಿ ಫಲವೂ ಸಿಗದೆ. ರಾಜ್ಯದ ಆದಾಯ ನಿರುಪಯೋಗವಾಗುತ್ತದೆ. ಆಲಮಟ್ಟಿ-ನಾರಾಯಣಪುರ ಯೋಜನೆಗಳೇ ಇದಕ್ಕೆ ಸಾಕ್ಷಿ.

ವಿಧಾನ ಸಭೆಯಲ್ಲಿ ದೇವೇಗೌಡರು ವಿವರಿಸಿ ಹೇಳಿರುವ ಯೋಜನೆಗಳೆಲ್ಲ ಪೂರ್ಣಗೊಳ್ಳಬೇಕಾದರೆ ಕನಿಷ್ಠ 20 ವರ್ಷಗಳಾದರೂ ಬೇಕೆಂದು ಹೇಳಿದ್ದಾರೆ. ಆ ಲೆಕ್ಕ ಹಾಕಿದ್ದಾದರೆ ಈ ಯೋಜನೆಗಳ ಖರ್ಚು ನಾಲ್ಕುಪಟ್ಟಿಗಿಂತಲೂ ಜಾಸ್ತಿಯಾಗುವುದರಲ್ಲಿ ಸಂಶಯವಿಲ್ಲ. ದೇವೇಗೌಡರಂತೆ ವಿಚಾರ ಮಾಡುವುದರಿಂದ ಯಾವ ಯೋಜನೆಯೂ ಪೂರ್ತಿಗೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ಜನತಾ ಸರಕಾರ ನಮ್ಮ ರಾಜ್ಯದ ಅವಶ್ಯಕತೆಗಳ ಕುರಿತು ವಿಚಾರಮಾಡಿ ಸ್ಪಷ್ಟನಿಲುವು ಅನುಸರಿಸುವುದು ಅಗತ್ಯ. ಎಲ್ಲ ಕಡೆ ಕೈಚಾಚುವುದರಿಂದ ಯಾವ ಪುರುಷಾರ್ಥವೂ ಸಾಧಿಸಲಾರದು. ಆದ್ದರಿಂದ ಜನತಾ ಸರಕಾರ ಎಲ್ಲ ವಿರೋಧ ಪಕ್ಷಗಳ, ಸಾಮೂಹಿಕ ಸಂಘಟನೆಗಳ ಅಭಿಪ್ರಾಯ ಕೇಳಿ ಅಗತ್ಯತೆಯ ತಳಹದಿಯಲ್ಲಿ ಯೋಜನೆಗಳ ಪೂರೈಕೆಗಾಗಿ ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ.

ಸಮತಾವಾದಿ ದೇಶಗಳಲ್ಲಿ ಕಂಟ್ರಾಕ್ಟ್ ಪದ್ಧತಿಯೆಂಬುದೇ ಇಲ್ಲ: ಅಣೆಕಟ್ಟು ಕಟ್ಟುವ ಹಾಗೆಯೇ ಇತರ ಕೆಲಸಗಳನ್ನೆಲ್ಲಾ ಸರಕಾರವೇ ಕೈಗೊಳ್ಳುತ್ತಿರುವುದರಿಂದ ಕಂಟ್ರಾಕ್ಟರರು ಮನಬಂದಂತೆ ಕರಾರುಗಳನ್ನು ಹೇರುವ, ಮಧ್ಯದಲ್ಲೇ ಕೆಲಸಗಳನ್ನು ನಿಲ್ಲಿಸಿ ಸರಕಾರವನ್ನು ಬೆದರಿಸಿ ಹೆಚ್ಚು ಹಣ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಬಂಡವಾಳ ಶಾಹಿ ಸಮಾಜದಲ್ಲಿ, ಕಂಟ್ರಾಕ್ಟನ್ನೆಲ್ಲ ಲಂಚದ ಅಮಿಷೆಯಿಂದಲೇ ನಿರ್ಧರಿಸುವ ಪರಿಪಾಠ ಇರುವಾಗ, ದೇಶದ ಭವಿಷ್ಯವನ್ನೇ ನಿರ್ಧರಿಸುವ ನೀರಾವರಿ, ವಿದ್ಯುತ್ ಯೋಜನೆಗಳನ್ನು ಜೂಜಾಟದ ವಸ್ತುಗಳನ್ನಾಗಿ ಉಪಯೋಗಿಸಿ ಪ್ರಗತಿಯನ್ನೇ ಕುಂಠಿತಗೊಳಿಸಿ ಜನಜೀವನವನ್ನು ಹಾಳುಮಾಡುವ ಪ್ರವೃತ್ತಿ ಜ್ಯಾರಿಯಲ್ಲಿರುವುದರಿಂದ ಯೋಜನೆಗಳೆಲ್ಲ ಸಕಾಲದಲ್ಲೇ ಪೂರ್ಣಗೊಳ್ಳದಿರಲು ಕಾರಣಗಳಲ್ಲೊಂದಾಗಿದೆ. ಆದ್ದರಿಂದ ಕಂಟ್ರಾಕ್ಟರರ ಹಾವಳಿಯನ್ನು ಕಡಿಮೆಮಾಡಿ ಸರಕಾರವೇ ಯೋಜನೆಗಳ ಜವಾಬ್ದಾರಿಗಳನ್ನೆಲ್ಲ ಹೊರುವುದು ಅತ್ಯಗತ್ಯ. ಇದರ ಸಲುವಾಗಿ ಕಾರ್ಮಿಕರ ನೌಕರದಾರರ ಸಹಕಾರ ಪಡೆಯುವುದು ಮಾತ್ರವಲ್ಲದೆ, ಸರಕಾರದ ನೀತಿಯಲ್ಲಿಯೂ ಮೂಲಭೂತ ಬದಲಾವಣೆಯಾಗುವುದು ಅತ್ಯಗತ್ಯ.

ರಾಜ್ಯದ ವಿವಿದೆಡೆ

ಯುದ್ಧ ವಿರೋಧಿ ದಿನಾಚರಣೆ

ಉಡುಪಿ :

"ನಮಗೆ ಯುದ್ಧ ಬೇಡ; ಶಾಂತಿ ಬೇಕು; ಜಗತ್ತಿನ ಎಲ್ಲೆಡೆ ಶಾಂತಿ ನೆಲೆಸಿದರೆ ಮಾತ್ರ ಮಾನವ ಕುಲದ ಪ್ರಗತಿ ಸಾಧ್ಯ. ಯುದ್ಧ ದುಡಿಯುವ ಜನತೆಗೆ ಮಾರಕ." ಇದು ಉಡುಪಿಯಲ್ಲಿ ಸೆಪ್ಟೆಂಬರ್ 1 ರಂದು ಜರುಗಿದ "ಯುದ್ಧ ವಿರೋಧಿ ದಿನಾಚರಣೆಯಲ್ಲಿ ವ್ಯಕ್ತವಾದ ಏಕಾಭಿಪ್ರಾಯ. ಕಾರ್ಮಿಕ ಸಂಘಗಳ ಜಾಗತಿಕ ಒಕ್ಕೂಟ (W.F.T.U.) ದ ಕರೆಯಂತೆ ಉಡುಪಿಯ ಕಾರ್ಮಿಕ ಸಂಘಗಳು ಸಂಯುಕ್ತವಾಗಿ ಕಾರ್ಯಕ್ರಮ ಆಚರಿಸಿದರು.

ಕಾ॥ ಪಿ. ವಿ. ರೈಯವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಸ್ಥಳೀಯ ಕಾರ್ಮಿಕ ಮುಖಂಡರುಗಳಾದ ಸರ್ವಶ್ರೀ ಎಸ್. ಎಸ್. ತೋನ್ಸೆ, ಶಂಕರ ಸೆಟ್ಟಿಗಾರ್, ಎಂ. ಆರ್. ಆಚಾರ್ ಮುಂತಾದವರು ಸಾಮ್ರಾಜ್ಯಶಾಹಿ ಯುದ್ಧ ಖೋರ ನೀತಿಯನ್ನು ಖಂಡಿಸಿದರಲ್ಲದೆ, ಸಮಾಜವಾದಿ ರಾಷ್ಟ್ರಗಳು ಶಾಂತಿಗಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಆರಂಭದಲ್ಲಿ ಕಾ॥ ಡೇವಿಡ್ ಕರ್ಕಡರವರು ಸ್ವಾಗತಿಸಿ ಕೊನೆಯಲ್ಲಿ, ಕಾ॥ ಮೋನಪ್ಪ ಸಾಲಿಯಾನ್ ವಂದನೆ ಸಲ್ಲಿಸಿದರು.

ಚಿಕ್ಕಮಗಳೂರು :

ತಾ. 1-9-1983 ರಂದು ಕಾಫಿ ಕ್ಯೂರಿಂಗ್ ಮತ್ತು ಇತರ ಕಾರ್ಮಿಕರ ಸಂಘ, ಚಿಕ್ಕಮಗಳೂರು ಇದರ ಆಶ್ರಯದಲ್ಲಿ ಸಿ.ಐ.ಟಿ.ಯು. ಕರೆಯ ಮೇರೆಗೆ ಜನತಾ ಪಕ್ಷದ ಕಛೇರಿಯಲ್ಲಿ ಶ್ರೀ ಎ.ಕೆ. ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಯುದ್ಧ ವಿರೋಧಿ ಶಾಂತಿ ದಿನವನ್ನು ಆಚರಿಸಲಾಯಿತು. ಮೇಲ್ಕಂಡ ಸಭೆಯಲ್ಲಿ ಸಂಘದ ಅಧ್ಯಕ್ಷರೂ ಹಾಗೂ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಲಿಯ ಪ್ರ. ಕಾರ್ಯದರ್ಶಿಯೂ ಆದ ಶ್ರೀ ಸಿ. ನಂಜುಂಡಪ್ಪನವರು ಮಾತನಾಡುತ್ತಾ ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಚೋದಕ ನೀತಿಯನ್ನು ಖಂಡಿಸಿ ಆ ಬಗ್ಗೆ ವಿವರಣೆಯನ್ನು ಸಭೆಗೆ ನೀಡಿದರು. ಅವರು ಮುಂದುವರೆದು ಮಾತನಾಡುತ್ತಾ ಅಣು ಯುದ್ಧ ಏನಾದರೂ ಈಗ ನಡೆದಲ್ಲಿ ಇಡೀ ಮಾನವಕೋಟಿ ನಾಶವಾಗುವಂತಹ ಅಣು ಆಯುಧಗಳನ್ನು ತಯಾರುಮಾಡಿ ಸಾಮ್ರಾಜ್ಯಶಾಹಿಗಳು ಇಟ್ಟಿರುತ್ತಾರೆ. ಭಾರತಾದ್ಯಂತ ದುಡಿಯುವ ಜನತೆ ಕಲ್ಕತ್ತಾ, ಮುಂಬಯಿ, ಬೆಂಗಳೂರು, ಮದರಾಸು, ಮುಂತಾದ ಬೃಹತ್ ನಗರಗಳಲ್ಲಿ ಯುದ್ಧ ವಿರೋಧಿ ಮತ ಪ್ರದರ್ಶನ ನಡೆಸುತ್ತಿದ್ದಾರೆ. ಯುದ್ಧವಾದರೆ ದುಡಿಯುವ ಜನ ಮೊದಲು ಕಷ್ಟಕ್ಕೆ ಈಡಾಗುತ್ತಾರೆಂದು ಸಭೆಗೆ ತಿಳಿಸಿ ಆದುದರಿಂದ ದುಡಿಯುವ ಜನ ಯುದ್ಧ ವಿರೋಧಿ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕೆಂದು ಕರೆ ಕೊಟ್ಟರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಎ. ಸಿ. ಕೇಶವ ಮತ್ತು ತೋಟ ಕಾರ್ಮಿಕ ಸಂಘದ ಉಪ ಕಾರ್ಯದರ್ಶಿಯವರಾದ ಕಳಸ ಸುಕುಮಾರ್‌ರವರು ಯುದ್ಧದ ಅಪಾಯದ ಬಗ್ಗೆ ಸಭೆಗೆ ವಿವರಿಸಿ ಕಾರ್ಮಿಕರೆಲ್ಲರೂ ಯುದ್ಧವನ್ನು ವಿರೋಧಿಸಬೇಕೆಂದು ಕರೆ ಕೊಟ್ಟರು. ತೋಟ ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಶ್ರೀ ಕೆ. ವೇಲಾಯುಧರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಮೂಡಿಗೆರೆ

ತಾರೀಖು 1-9-83ರಂದು ಕೆ. ಪಿ.ಪಿ.ಡಬ್ಲ್ಯೂ ಯೂನಿಯನ್ (ಸಿ. ಐ, ಟಿ. ಯು) ಇದರ ಆಶ್ರಯದಲ್ಲಿ ಮೂಡಿಗೆರೆಯಲ್ಲಿ ಕಳಸಾದ ಕೆ. ಸುಕುಮಾರ್‌ರವರ ಅಧ್ಯಕ್ಷತೆಯಲ್ಲಿ ಯುದ್ಧ ವಿರೋಧಿ ಶಾಂತಿ ದಿನವನ್ನು ಆಚರಿಸಲಾಯಿತು. ಮೇಲ್ಕಂಡ ಸಭೆಯಲ್ಲಿ ಕೆ. ಪಿ. ಪಿ. ಡಬ್ಲ್ಯೂ ಯೂನಿಯನ್ ಅಧ್ಯಕ್ಷರೂ, ಕರ್ನಾಟಕ ರಾಜ್ಯ ಸಿ. ಐ. ಟಿ. ಯು ಪ್ರಧಾನ ಕಾರ್ಯದರ್ಶಿಯವರಾದ ಕಾ॥ ಸಿ. ನಂಜುಂಡಪ್ಪನವರು, ವಿಶ್ವಶಾಂತಿಯ ಅಗತ್ಯತೆಯನ್ನು ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಚೋದಕ ನೀತಿಯನ್ನು ಸಭೆಗೆ ಸವಿವರವಾಗಿ ವಿವರಿಸಿ, ಪ್ರಪಂಚದ ಮಾನವ ಕೋಟಿಯನ್ನೆಲ್ಲಾ ಮುಗಿಸುವ ಯುದ್ಧ ಪ್ರಚೋದಕತನವನ್ನು ಖಂಡಿಸಿದರು. ಯುದ್ಧ ಮನೆಯ ಬಾಗಿಲಿಗೇ ಬಂದಿದೆ, ಅಣು ಯುದ್ಧವೇನಾದರೂ ಈಗ ನಡೆದಲ್ಲಿ ಪ್ರಪಂಚವೇ ನಾಶವಾಗಲಿದೆ. ಇದನ್ನು ಕಾರ್ಮಿಕ ವರ್ಗ ತೀವ್ರವಾಗಿ ಈ ಯುದ್ಧ ನೀತಿಯನ್ನು ಖಂಡಿಸಬೇಕೆಂದು, ಪ್ರಪಂಚದಾದ್ಯಂತ ಈ ದಿನ ಯುದ್ಧ ವಿರೋಧಿ ದಿನವನ್ನಾಗಿ ಆಚರಿಸುತ್ತಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರಾದ ಕಾ। ಎ. ಸಿ. ಕೇಶವ ಮತ್ತು ಉಪ ಕಾರ್ಯದರ್ಶಿ ಕೆ. ಸುಕುಮಾರ್ ಕಳಸ ಯುದ್ಧದ ಅಪಾಯದ ಬಗ್ಗೆ ಸಭೆಗೆ ವಿವರಿಸಿ ಕಾರ್ಮಿಕರೆಲ್ಲರೂ ಯುದ್ಧ ತಯಾರಿಕೆಯನ್ನು ವಿರೋಧಿಸಬೇಕೆಂದು ಕರೆ ನೀಡಿದರು.

ಕುಂದಾಪುರ

ತಾರೀಖು 1-9-1983ರಂದು ಕುಂದಾಪುರದಲ್ಲಿ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ತಾಲ್ಲೂಕು ಸಮಿತಿ ಹಾಗೂ ಸಿ. ಐ. ಟಿ. ಯುವಿಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ, ಹಂಚಿನ ಮಜೂರರ ಕಚೇರಿಯಲ್ಲಿ ಸಂಜೆ 5 ಗಂಟೆಗೆ ವಿಸ್ತೃತ ಸಭೆಯು ಸೇರಿ "ವಿಶ್ವ ಶಾಂತಿ ದಿನ" ವನ್ನು ಆಚರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾ। ಅಬ್ರಹಾಂ ಕರ್ಕಡರು ವಹಿಸಿದ್ದು, ಆರಂಭದಲ್ಲಿ ಕಾ। ವಿ. ಮಹಾಬಲರವರು ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರಾದ ಕಾ। ಸಿ. ನಾರಾಯಣ, ಕಾ। ಕೆ. ಶಂಕರ್ ಮತ್ತು ಕಾ। ಅಬ್ರಹಾಂ ಕರ್ಕಡರು ಮಾತನಾಡಿ ಸಾಮ್ರಾಜ್ಯಶಾಹೀ ರಾಷ್ಟ್ರಗಳ ಯುದ್ಧ ಪ್ರಯತ್ನವನ್ನು ಖಂಡಿಸಿದರು. ಇಂದಿನ ಯುದ್ಧ ವಿರೋಧಿ ಹೋರಾಟ ಕೇವಲ ಶಾಂತಿ ಹೋರಾಟವಾಗಿರದೇ, ಯುದ್ಧವನ್ನು ವಿರೋಧಿಸುವ ಚೈತನ್ಯ ಪೂರ್ಣ ಹೋರಾಟವಾಗಿ, ಕಾರ್ಮಿಕ ವರ್ಗದ ಉಳಿವಿಗಾಗಿ. ಶೋಷಣೆ ರಹಿತ ಸಮಾಜ ನಿರ್ಮಾಣಕ್ಕಾಗಿ ನಡೆಯುವ ಹೋರಾಟ ಇದಾಗಬೇಕು ಹಾಗೂ ಶ್ರಮಜೀವಿಗಳ ಜೀವನ ಮಟ್ಟ ಸುಧಾರಿಸಲು ಯುದ್ಧಗಳು ಇಲ್ಲವಾಗಬೇಕೆಂದು ಹೇಳಿದರು.

ಪ್ರಕಟಣೆ :

ಜನವರಿ 1983ರ ವಿಧಾನಸಭಾ ಚುನಾವಣೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಚುನಾವಣಾ ಪ್ರಚಾರ ಮಾಡಿದುದರಿಂದ ಮತ್ತು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದುದರಿಂದ ಶ್ರೀ ಸಿ. ಬಿ. ಪಾಟೀಲ್ ಅವರನ್ನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದಿಂದ ಸಸ್ಪೆಂಡ್ ಮಾಡಿ ಈ ಕುರಿತು ತನಿಖೆ ನಡೆಸಲು ವಿಚಾರಣಾ ಸಮಿತಿಯನ್ನು ನೇಮಿಸಲಾಗಿತ್ತು. ಅವರ ಮೇಲಿನ ಆಪಾದನೆ ನಿಜವಾದುದೆಂದು ವಿಚಾರಣಾ ಸಮಿತಿ ನಿರ್ಣಯಿಸಿರುವುದರಿಂದ ಶ್ರೀ ಸಿ. ಬಿ. ಪಾಟೀಲರನ್ನು ಕೆಲವು ತಿಂಗಳ ಹಿಂದೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ವಜಾ ಮಾಡಲಾಯಿತೆಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಮುಹಮ್ಮದ್ ಹಸನ್ ಖಾನ್ ತಿಳಿಸಿದ್ದಾರೆ.

ಮೈಸೂರು :

ಎಸ್. ಎಫ್. ಐ ನಗರ ಸಮಿತಿ ರಚನೆ

24-8-1983 ರಂದು ಮೈಸೂರಿನಲ್ಲಿ ಸೇರಿದ್ದ ವಿದ್ಯಾರ್ಥಿಗಳ ಸಭೆಯಲ್ಲಿ ಎಸ್. ಎಫ್. ಐ. ಮೈಸೂರು ನಗರ ಸಮಿತಿಗೆ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಎಂ. ಎಸ್. ವಿಜಯಕುಮಾರ್, (ಅಧ್ಯಕ್ಷರು), ಗಾಂಧಿಬಾಬು ಆರ್. (ಉಪಾಧ್ಯಕ್ಷರು), ಬಂಜೆಗೆರ್ ಜಯಪ್ರಕಾಶ್ (ಕಾರ್ಯದರ್ಶಿ), ನಂಜುಂಡೆಗೌಡ, (ಸಹ ಕಾರ್ಯದರ್ಶಿ) ಅಶೋಕ್ ಕುಮಾರ್, (ಖಜಾಂಚಿ)

ಸೆಪ್ಟಂಬರ್ 17, 18, 19ರಂದು ಮೈಸೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಯಶಸ್ವಿಗೊಳಿಸುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ವಿದ್ಯಾರ್ಥಿ ಸಂಘಕ್ಕೆ ಆಯ್ಕೆ

ಕುಂದಾಪುರ :

ದ. ಕ. ಜಿಲ್ಲೆಯ ಕುಂದಾಪುರದ ಸರಕಾರಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್. ಎಫ್. ಐ. ಅಭ್ಯರ್ಥಿ ಕಾಂ. ಅಶೋಕ್ ನಾಯಕ್‌ರವರು ಅಧ್ಯಕ್ಷರಾಗಿ ಬಹುಮತದಿಂದ ಆಯ್ಕೆಯಾಗಿರುತ್ತಾರೆ. ಇದೇ ಮೊದಲ ಬಾರಿಗೆ ನೇರವಾಗಿ ಎಸ್. ಎಫ್. ಐ. ಹೆಸರಿನಲ್ಲಿ ಸ್ಪರ್ಧಿಸಿ ಜಯಗಳಿಸಿರುವುದು ಸಂಘಟನೆ ವಿಶಾಲವಾಗಿ ಬೆಳೆದಿರುವುದರ ಸಂಕೇತ. ತರಗತಿ ಮುಖಂಡರುಗಳಾಗಿ ಬಹುಮತದಿಂದ ಹೆಚ್ಚಿನ ಎಸ್. ಎಫ್. ಐ. ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ.

ಮೈಸೂರು :

ಮೈಸೂರಿನ ಯುವರಾಜ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ಇತ್ತೀಚೆಗೆ ನಡೆದ ನೇರ ಚುನಾವಣೆಯಲ್ಲಿ ಎಸ್. ಎಫ್. ಐ. ರಾಜ್ಯ ಸಮಿತಿಯ ಸದಸ್ಯರೂ, ಮೈಸೂರು ನಗರ ಘಟಕದ ಖಜಾಂಚಿಯೂ ಆಗಿರುವ ಕಾ. ಎಂ. ಎಸ್. ಅಶೋಕ್ ಕುಮಾರ್‌ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ನಗರ ಸಮಿತಿಯ ಉಪಾಧ್ಯಕ್ಷರಾಗಿರುವ ಗಾಂಧಿಬಾಬುರವರು ಯುವರಾಜ ಕಾಲೇಜಿನ ವಿದ್ಯಾರ್ಥಿ ಸಂಘದ ಜೊತೆ ಕಾರ್ಯದರ್ಶಿಯಾಗಿ, ಎಸ್. ಎಫ್. ಐ. ಸದಸ್ಯರಾದ ಶಿವಕುಮಾರ್‌ರವರು ಅಂತಿಮ ಡಿಗ್ರಿ ವಿದ್ಯಾರ್ಥಿ ಪ್ರತಿನಿಧಿಯಾಗಿ ಆಯ್ಕೆಯಾಗಿರುತ್ತಾರೆ. ಮೈಸೂರಿನ ವಿದ್ಯಾವರ್ಧಕ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್. ಎಫ್. ಐ. ಬೆಂಬಲಿತ ಅಭ್ಯರ್ಥಿ ಜಗದೀಶ್ ನೇರ ಸ್ಪರ್ಧೆಯಲ್ಲಿ ಅಧ್ಯಕ್ಷರಾಗಿ ಬಹುಮತದಿಂದ ಚುನಾಯಿತರಾಗಿದ್ದಾರೆ.

ಪಾಕ್ ಚಳವಳಿಗೆ ಸಿ. ಪಿ. ಐ. (ಎಂ) ಬೆಂಬಲ

ಜಿಯಾಉಲ್‌ಹಖ್ ಅವರ ಬರ್ಬರ ಮಿಲಿಟರಿ ಸರ್ಕಾರದ ವಿರುದ್ಧ ವೀರೋಚಿತ ಹೋರಾಟಕ್ಕೆ ಇಳಿದಿರುವ ಪಾಕಿಸ್ತಾನದ ಜನತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಅಭಿನಂದಿಸುತ್ತದೆ. ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಮರುಸ್ಥಾಪನೆಗೆ ಹಾಗೂ ಸಾರ್ವತ್ರಿಕ ಚುನಾವಣೆಗಳಿಗಾಗಿ ಬಹುತೇಕ ಎಲ್ಲಾ ವಿರೋಧ ಪಕ್ಷಗಳು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಮುಂದೆ ಬಂದಿರುವುದು ಸ್ವಾಗತಾರ್ಹ.

ಒಂದರ ಮೇಲೆ ಒಂದೆನ್ನುವಂತೆ ಅಧಿಕಾರಕ್ಕೆ ಬಂದ ಮಿಲಿಟರಿ ಸರ್ಕಾರಗಳಡಿ ಪಾಕ್ ಜನರು ಉಸಿರು ಕಟ್ಟಿದ್ದಾರೆ. ಈಗಿನ ಜಿಯಾಉಲ್‌ಹಖ್ ಸರ್ಕಾರವು ಅಮೆರಿಕಾ ಸಾಮ್ರಾಜ್ಯಶಾಹಿ ಕೈಗೊಂಬೆಯಾಗಿದ್ದು ಪಾಕಿಸ್ಥಾನದ ಜನರನ್ನು ದಮನ ಮಾಡುತ್ತಿದೆ. ಈ ಆಳ್ವಿಕೆಯು ಪಾಕಿಸ್ಥಾನದಲ್ಲಿ ಜಾರಿಗೆ ಬಂದಿದ್ದ 1973 ರ ಸಂವಿಧಾನವನ್ನು ಬುಡಮೇಲುಗೊಳಿಸಿ ಆ ದೇಶದಲ್ಲಿ ಎಲ್ಲಾ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕಿದೆ. ಇಸ್ಲಾಂ ತತ್ವಗಳನ್ನು ಜಾರಿಗೊಳಿಸುವ ಹೆಸರಿನಲ್ಲಿ ಪಾಕ್ ಪ್ರಜೆಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಿ ಜನತೆಯ ವಿರುದ್ಧ ಅತ್ಯಂತ ಹೇಯವಾದ ಅಕೃತ್ಯಗಳನ್ನು ಎಸಗಿದೆ.

ಈಗಿನ ಮಿಲಿಟರಿ ಆಡಳಿತವನ್ನು ಮುಂದುವರಿಸಲು ಅನುವಾಗುವಂತೆ ಜಿಯಾ ಸರ್ಕಾರವು ಆಗಸ್ಟ್ 12ರಂದು ಪ್ರಕಟಣೆ ಹೊರಡಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಘೋಷಿಸಿದೆ. ಪಾಕ್ ಸಂಸತ್ತಿಗೆ 1985 ರ ಮಾರ್ಚ್ ಒಳಗಾಗಿ ಸಾರ್ವತ್ರಿಕ ಚುನಾವಣೆ ನಡೆಸುವುದಾಗಿಯೂ ಅದು ಘೋಷಿಸಿದೆ. ಪಾಕ್ ಸರ್ಕಾರದ ಈ ಘೋಷಣೆಯನ್ನು ಅಲ್ಲಿನ ಎಲ್ಲಾ ರಾಜಕೀಯ ಪಕ್ಷಗಳು ತಿರಸ್ಕರಿಸಿವೆ. ಜಿಯಾ ಸರ್ಕಾರದ ಮೈತ್ರಿ ಪಕ್ಷವಾದ ಜಮಾಯತ್-ಇಸ್ಲಾಮಿ ಪಕ್ಷವು ಸರ್ಕಾರದ ಈ ಉದ್ದೇಶವನ್ನು ತಿರಸ್ಕರಿಸಿದೆ.

ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ನಿರಾಕರಿಸಿರುವುದರಿಂದ ಪಾಕಿಸ್ತಾನದಲ್ಲಿ ಉಸಿರು ಕಟ್ಟುವ ವಾತಾವರಣ ನಿರ್ಮಾಣವಾಗಿ, ಅದರ ನಂತರದ ಸ್ಫೋಟವೇ ಪಾಕಿಸ್ತಾನದ ಪ್ರಸಕ್ತ ಚಳವಳಿ. ಸಾವನ್ನು ಎದುರು ಹಾಕಿ

(8ನೇ ಪುಟ ನೋಡಿ)

ವಿಜಯನಗರ ಉಕ್ಕು ಕಾರ್ಖಾನೆ ಕನ್ನಡಿಗರಿಗೆ ಸಧ್ಯ ಗಗನ ಕುಸುಮವೇ ?

ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ ಬಗ್ಗೆ ಕಳೆದ 12 ವರ್ಷಗಳಿಂದ ಸಮಸ್ತ ಕನ್ನಡಿಗರು ಆಸೆಗಣ್ಣುಗಳಿಂದ ನಿರೀಕ್ಷಿಸುತ್ತಿದ್ದರು. ಒಮ್ಮೆ ಮ್ಮೆ ಗತ ವೈಭವದ ವಿಜಯನಗರ ಸಾಮ್ರಾಜ್ಯದಲ್ಲಿ ವಿಹರಿಸಿದಂತೆ ಭಾಸವಾಗುತ್ತಿತ್ತು. ನಮ್ಮ ಪ್ರಧಾನಿ ಶ್ರೀಮಂತಿ ಇಂದಿರಾಗಾಂದಿ ಬೆಂಗಳೂರು—ಗುಂತಕಲ್ ಬ್ರಾಡ್‌ಗೇಜ್ ರೈಲು ಉದ್ಘಾಟಿಸಲು ಕರ್ನಾಟಕಕ್ಕೆ ಬಂದು ವಿಜಯನಗರ ಉಕ್ಕು ಕಾರ್ಖಾನೆಗೆ ತಣ್ಣೀರು ಎರಚಿ ಹೋದರು. ವಿಜಯನಗರ ಕಾರ್ಖಾನೆಯನ್ನು ಕೇವಲ ಕರ್ನಾಟಕ ದೃಷ್ಟಿಯಿಂದ ನೋಡಬಾರದು. ಅದು ರಾಷ್ಟ್ರದ ಪ್ರಗತಿಯ ಹಾದಿಯಲ್ಲಿ ಮೈಲುಗಲ್ಲು ಆಗುವುದರಲ್ಲಿತ್ತು. ಆದರೆ ಪ್ರಧಾನಿಗಳು ಅದಕ್ಕೆ ವಿದ್ಯುತ್ ಶಾಖ ಕೊಟ್ಟು ಕರಗಿಸಿದರು.

ವಿಜಯನಗರ ಉಕ್ಕು ಕಾರ್ಖಾನೆ ಶಂಕು ಸ್ಥಾಪನೆ ಮಾಡುವ ಮುನ್ನ ರಾಷ್ಟ್ರದಲ್ಲಿಯ ತಜ್ಞರ ಸಲಹೆ ಅಲ್ಲದೆ ಪರದೇಶಗಳ ತಜ್ಞರ ಸಲಹೆ ಪಡೆದುಕೊಂಡೇ 1971ರಲ್ಲಿ ಆಗಿನ, ಈಗಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂದಿಯವರೇ ವಿಜಯನಗರ ಉಕ್ಕು ಕಾರ್ಖಾನೆ ಶಂಕು ಸ್ಥಾಪನೆ ಮಾಡಿದಾಗ ಕನ್ನಡನಾಡಿನ ಜನತೆ ಹರ್ಷೋದ್ಗಾರ ಮೊಳಗಿಸಿದರು. ಆಗ ಹೊಸಪೇಟೆ ಮತಕ್ಷೇತ್ರದ ವಿಧಾನಸಭೆಯ ಉಪ ಚುನಾವಣೆ ಕೂಡಾ ನಡೆದಿತ್ತು. ನಂತರ ಕರ್ನಾಟಕ ಸರಕಾರ ಕಾರ್ಖಾನೆ ಸ್ಥಾಪಿಸಲು ಪೂರ್ವಭಾವಿಯಾಗಿ ಸುಮಾರು 7 ಸಾವಿರ ಎಕರೆಯಷ್ಟು ಭೂಮಿಯನ್ನು ತನ್ನ ಸ್ವಾಧೀನ ಪಡೆದುಕೊಂಡು ಭೂಮಾಲೀಕರಿಗೆ ಮೂರುವರೆನೂರು ಕೋಟಿ ರೂ.ಗಳಷ್ಟು ಧನವನ್ನು ಪರಿಹಾರವೆಂದು ನೀಡಲಾಯಿತು. ಕಾರ್ಖಾನೆಗೆ ನೀರು ಸರಬರಾಜು ರಸ್ತೆ, ರಚಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡು ಜಾರಿಯಲ್ಲಿ ಕೊಟ್ಟದ್ದಾಯಿತು.

ಗತಿಸಿದ ಹನ್ನೆರಡು ವರ್ಷಗಳಲ್ಲಿ ರಾಷ್ಟ್ರದ ಮತ್ತಿತರ ಭಾಗಗಳಲ್ಲಿ ಕಾರಖಾನೆಗಳು ಪ್ರಾರಂಭವಾಗಿ ಪ್ರಗತಿಯನ್ನು ಕಂಡದ್ದಾಗಿದೆ. ರಾಷ್ಟ್ರದ ಒಟ್ಟು ಖನಿಜ ಸಂಪತ್ತಿನಲ್ಲಿ ಕರ್ನಾಟಕದ್ದೇ ಅಗ್ರವಾದ ಪಾಲು. ಅದರಲ್ಲಿ ನಿಸರ್ಗದತ್ತವಾಗಿ ಹೊಸಪೇಟೆ, ಸೊಂಡೂರುಗಳಲ್ಲಿ ಅತ್ಯುತ್ತಮವಾದ ಖನಿಜ ಸಂಪತ್ತು ಹೇರಳವಾಗಿದೆ ಎಂದು ಭೂಗರ್ಭ ಇಲಾಖೆಯವರ ಸ್ಪಷ್ಟ ಅಭಿಪ್ರಾಯ. ಶೀಘ್ರವೇ ಕಾರಖಾನೆ ಪ್ರಾರಂಭವಾಗುವದೆಂದು ಯೋಜನೆ ಹಾಕಿಕೊಂಡ ಕರ್ನಾಟಕ ಸರಕಾರ ತಜ್ಞರ ಸಲಹೆ ಪ್ರಕಾರ ಸುಮಾರು 70-80 ಚಿಕ್ಕಪ್ರಮಾಣದ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಕೂಲಕರವೆಂಬ ಸಮೀಕ್ಷೆಯನ್ನು ತಯಾರಿಸಲಾಯಿತು.

ಕರ್ನಾಟಕದ ಸುಮಾರು 4 ಕೋಟಿ ಪ್ರಜೆಗಳ ಜೀವಾಳದ ಅಭ್ಯುದಯದ ಮುಖ್ಯವಾದ ವಿಜಯನಗರ ಉಕ್ಕು ಕಾರಖಾನೆ ಕಾರ್ಯರೂಪದಲ್ಲಿ ತರುವ ಪ್ರಶ್ನೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಸಾಧನೆಗಾಗಿ ನಮ್ಮ ರಾಜ್ಯದಿಂದ ಆರಿಸಿ ಹೋದ ಲೋಕಸಭೆಯ ಸದಸ್ಯರು ಈಗಿನ ಲೋಕಸಭೆ ಸದಸ್ಯರಲ್ಲಿ ಒಬ್ಬಬ್ಬ ಸದಸ್ಯರನ್ನು ಬಿಟ್ಟಲ್ಲಿ ಉಳಿದ ಸದಸ್ಯರಿಗೆ ಕಾರಖಾನೆಯ ಕಲ್ಪನೆಯಾದರೂ ಇದೆಯೋ ಇಲ್ಲವೋ ತಿಳಿಯದಾಗಿದೆ. ಇಲ್ಲಿಯವರೆಗೆ ಲೋಕಸಭೆಯಲ್ಲಿ ಈ ವಿಷಯದಲ್ಲಿ ಅಭ್ಯಸಿಸಿ ಲೋಕಸಭೆಯಲ್ಲಿ ಈ ಪ್ರಶ್ನೋತ್ತರ ಮಾಡಿದ ಸದಸ್ಯರ ಸಂಖ್ಯೆ ಎಷ್ಟು ? ಇದು ಕರ್ನಾಟಕದ ದುರ್ದೈವದ ಸಂಗತಿ. ಕನ್ನಡಿಗರಾದ ನಾವು ಕೈಕಟ್ಟಿ ಕೂರ್ರುಬಾರದು.

ವಿಜಯನಗರ ಉಕ್ಕು ಕಾರ್ಖಾನೆಯ ಕಾರ್ಯಸಾಧನೆಗಾಗಿ ಕರ್ನಾಟಕದಲ್ಲಿಯ ಬುದ್ಧಿ ಜೀವಿಗಳೂ ಎಲ್ಲ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಕಾರ್ಮಿಕರು ಯುವಕರು ಮುಂತಾಗಿ ವಿಜಯನಗರ ಉಕ್ಕು ಕಾರ್ಖಾನೆ ಕಾರ್ಯರೂಪದಲ್ಲಿ ಬರುವುದಕ್ಕೋಸ್ಕರ ಮಹತ್ತರವಾದ ಕಾರ್ಯ ಕೈಗೆತ್ತಿಕೊಂಡು ಮುನ್ನಡೆಯಬೇಕಾಗಿದೆ.

ಪಾವಗಡ : ಬೆಲೆ ಏರಿಕೆ ವಿರೋಧಿ ದಿನಾಚರಣೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಕರೆ ಮೇರೆಗೆ ತಾ॥ 11-8-83 ರಂದು ಕಾ। ಆರ್. ಶಂಕರನಾರಾಯಣರಾವ್ ರವರ ನೇತೃತ್ವದಲ್ಲಿ ಪುರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದು ಕೊನೆಯಲ್ಲಿ ತಹಶೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ತಹಶೀಲ್ದಾರ್ ರವರು ಆರ್. ಶಂಕರನಾರಾಯಣ ರಾವ್ ಮತ್ತು ಸಂಗಡಿಗರನ್ನು ಆಹ್ವಾನಿಸಿ—ಅಹವಾಲನ್ನು ಸರಕಾರಕ್ಕೆ ತಿಳಿಸಿ, ತಕ್ಕ ಕ್ರಮಗಳನ್ನು ನಡೆಸುತ್ತೇವೆಂದು ಆಶ್ವಾಸನೆ ಕೊಟ್ಟು ಅದರಂತೆ ಡೆಪ್ಯುಟಿ ಕಮೀಷನರ್‌ರವರಿಗೆ ಮನವಿ ಬಗ್ಗೆ ಶಿಫಾರಸು ಮಾಡಿದರು.

ಮೆರವಣಿಗೆಯಲ್ಲಿ ಅಕ್ಕಿ, ಸಕ್ಕರೆ, ಸೀಮೆಎಣ್ಣೆ, ಸೋಪು ಮುಂತಾದ ವಸ್ತುಗಳ ಬೆಲೆ ಇಳಿಸಲು, ಬೆಲೆ ಏರಿಕೆಗೆ ಕೇಂದ್ರ ಸರಕಾರವೇ ವಿನಹ ರಾಜ್ಯ ಸರ್ಕಾರ ಕಾರಣವಲ್ಲವೆಂತಲೂ, ಕೇಂದ್ರ ಸರ್ಕಾರದ ಆರ್ಥಿಕ ನೀತಿಗೆ ಧಿಕ್ಕಾರ, ಬೆಲೆಗಳನ್ನು ಸಮತಾವಾದಿ ದೇಶಗಳಲ್ಲಿಯಂತೆ ನಿರ್ಧರಿಸಬೇಕೆಂತಲೂ ಮತ್ತು ಕೆಂಪು ಬಾವುಟ ಚಿರಾಯುವಾಗಲಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ ಎಂಬ ಘೋಷಣೆಗಳನ್ನು ಕೂಗಿದರು.

ಮಂಗಳೂರು ಪರಿಹಾರಕ್ಕೆ ಒತ್ತಾಯ

ತಾ॥ 3-9-83 ರಂದು ಬೆಳಿಗ್ಗೆ ಮಂಗಳೂರು ಕಲ್ಲಾಪು ಎಂಬಲ್ಲಿ ಸಿಟಿ ಬಸ್ಸೊಂದು ರಸ್ತೆಯ ಬದಿಯ ತಗ್ಗು ಸ್ಥಳಕ್ಕೆ ಉರುಳಿ ಬಿದ್ದು ಹಲವಾರು ಮಂದಿ ತೀವ್ರ ಜಖಂಗೊಂಡು ಶುಶ್ರೂಷೆಗಾಗಿ ಸರಕಾರಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ. ತೀವ್ರ ಜಖಂಗೊಂಡ ಒಬ್ಬರು ಮರಣ ಹೊಂದಿದ್ದಾರೆ.

ಸುದ್ಧಿ ತಿಳಿದು ಆಸ್ಪತ್ರೆಗೆ ಭೇಟಿ ನೀಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಮಾನರು ಅಪಘಾತಕ್ಕೀಡಾದವರನ್ನು ಕಂಡು ಸಂತೈಸಿ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಮತ್ತು ಅವರು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ನಿಧನ ಹೊಂದಿದವರ ಕುಟುಂಬಕ್ಕೆ ಮತ್ತು ಅಪಘಾತಕ್ಕೀಡಾದವರಿಗೆ ಯೋಗ್ಯ ಪರಿಹಾರವನ್ನು ಸರಕಾರ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಪಾಕ್ ಚಳುವಳಿಗೆ ಸಿ.ಪಿ.ಐ. (ಎಂ) ಬೆಂಬಲ

(6ನೇ ಪುಟದಿಂದ)

ಕೊಳ್ಳುವ ಧೈರ್ಯದೊಡನೆ ಪಾಕ್ ಜನರೀಗ ಮಿಲಿಟರಿ ಆಡಳಿತದ ವಿರುದ್ಧ ರೈಲ್ವೆ ನಿಲ್ದಾಣಗಳು, ಜೈಲುಗಳು, ಸರ್ಕಾರಿ ಕಚೇರಿಗಳ ಮೇಲೆ ಧಾಳಿ ಮಾಡಲಾಗುತ್ತಿದೆ. ಕಾರ್ಮಿಕ ವರ್ಗ, ಮಧ್ಯಮ ವರ್ಗ, ವಕೀಲರು, ವಿದ್ಯಾರ್ಥಿಗಳು ಮಹಿಳೆಯರಾದಿಯಾಗಿ ಇಡೀ ಜನತೆ ಹೋರಾಟದಲ್ಲಿ ಧುಮುಕಿದ್ದಾರೆ ಜನತೆಯ ಈ ನ್ಯಾಯಬದ್ಧ ಹೋರಾಟಕ್ಕೆ ವಿರುದ್ಧವಾಗಿ ಮಿಲಿಟರಿ ಸರ್ವಾಧಿಕಾರವು ಗೋಲಿಬಾರ್, ಅಮಾನುಷ ಥಡಿ ಏಟುಗಳು ಹಾಗೂ ಕಠಿಣ ಜೈಲು ಶಿಕ್ಷೆ ಮುಂತಾದ ಅಸ್ತ್ರಗಳನ್ನೊಡ್ಡಿದೆ. ಕ್ರಮೇಣ ಕ್ರಮೇಣವಾಗಿ ಎಲ್ಲಾ ಜಿಲ್ಲೆಗಳನ್ನು ಮಿಲಿಟರಿ ವಶಕ್ಕೆ ಒಪ್ಪಿಸಲಾಗುತ್ತಿದೆ. ಆದರೆ ಜನತೆಯ ಚಳವಳಿ ಶಕ್ತಿ ಇಮ್ಮಡಿಸುತ್ತಿದೆ. ವಾಸ್ತವ ಸಂಗತಿ ಎಂದರೆ ಚಳವಳಿಯು ಬಲವಾಗಿದ್ದ ಸಿಂಧ್ ಪ್ರಾಂತ್ಯದಿಂದ ಬಲೂಚಿಸ್ತಾನ, ವಾಯುವ್ಯ ಗಡಿವರೆಗೆ ಈಗ ವ್ಯಾಪಿಸಿದೆ. ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಪಂಜಾಬಿನ ಜನತೆಗೂ ಕರೆ ಕೊಡಲಾಗಿದೆ.

ಪಾಕ್ ಜನರ ಚಳವಳಿಯನ್ನು ದಮನ ಮಾಡುತ್ತಿರುವ ಜಿಯಾ ಅವರ ಮಿಲಿಟರಿ ಸರ್ಕಾರದ ಕ್ರಮಗಳನ್ನು ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಖಂಡಿಸುತ್ತದೆ. ಹೋರಾಟ ಪಥದಲ್ಲಿರುವ ಪಾಕಿಸ್ತಾನದ ಜನತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಸಂಪೂರ್ಣ ಬೆಂಬಲ ನೀಡುತ್ತದೆ. ಮಿಲಿಟರಿ ಸರ್ಕಾರದ ವಿರುದ್ಧ ಪಾಕ್ ಜನರು ಜಯಗಳಿಸಿ ಪ್ರಜಾಸತ್ತಾತ್ಮಕ ಪಾಕಿಸ್ತಾನ್ ರಾಷ್ಟ್ರ ಕಟ್ಟುವಲ್ಲಿ ಪಾಕ್ ಜನರು ಯಶಸ್ವಿಯಾಗುವರೆಂದು ಸಿ.ಪಿ.ಐ.(ಎಂ) ವಿಶ್ವಾಸ ಹೊಂದಿದೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಕಾರ್ಯನೀತಿ

ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಕಾರ್ಯನೀತಿಗಳನ್ನು ದೇಶದಾದ್ಯಂತ ಜನತೆಗೆ ತಿಳಿಸುವ ಸದುದ್ದೇಶದಿಂದ ಕರ್ನಾಟಕದಲ್ಲಿ ಸೆಪ್ಟಂಬರ್ ತಾ. 6-9ರ ವರೆಗೆ ಬೆಂಗಳೂರಿನಲ್ಲಿ ಸಭೆ, ವಸ್ತು ಪ್ರದರ್ಶನ, ವಿಚಾರ ಸಂಕಿರಣ, ಚಿತ್ರ ಪ್ರದರ್ಶನ ಇತ್ಯಾದಿಗಳು ನಡೆಯುತ್ತಾ ಬಂದಿದೆ. ಪಶ್ಚಿಮ ಬಂಗಾಳದ ವಿದ್ಯಾಮಂತ್ರಿ ಶ್ರೀ ಕಾಂತಿ ಬಿಶ್ವಾಸ್ ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿ ಶ್ರೀ ಪ್ರೊಬಾಸ್ ಪೊಧೀಕರ್ ಈ ಕಾರ್ಯಕ್ರಮಗಳಲ್ಲಿ ಪಶ್ಚಿಮ ಬಂಗಾಳದ ಪರವಾಗಿ ಭಾಗವಹಿಸಿದ್ದರು.

ಸೆಪ್ಟಂಬರ್ ತಾ. 6ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮಾತಾಡುತ್ತಾ "ಪಶ್ಚಿಮ ಬಂಗಾಳದ ಎಡರಂಗ ಸರಕಾರವು ದೇಶದ ಐದು ಕಾಂಗ್ರೆಸ್ಸೇತರ ಸರಕಾರಗಳಲ್ಲಿ ಒಂದು ಪ್ರಮುಖವಾದ ಸರಕಾರ. ದೇಶದ ಅಧಿಕಾರದ ಗುತ್ತಿಗೆ ಒಂದೇ ಪಕ್ಷಕ್ಕೆ ದೇಶದ ಜನತೆ ವಹಿಸಿಕೊಟ್ಟಿಲ್ಲ. ಯಾವುದೇ ಒಂದು ಪಕ್ಷ ಆ ರೀತಿ ತಿಳಿದುಕೊಂಡಿದ್ದರೆ ಅದು ತೀರಾ ತಪ್ಪು ಗಂಡಾಂತರಕಾರಿ ತಿಳುವಳಿಕೆ, ಕಾ। ಜ್ಯೋತಿಬಸುರವರು ಇಂದು ಪಶ್ಚಿಮ ಬಂಗಾಳದ ಜನತೆಯ ಮುಂದಾಳು ಮಾತ್ರವಲ್ಲ, ಕೆಲವೇ ಕೆಲವು ರಾಷ್ಟ್ರೀಯ ಮುಖಂಡರಲ್ಲಿ ಒಬ್ಬರು. ಪಶ್ಚಿಮ ಬಂಗಾಳದ ಹಲವು ಜನಪ್ರಿಯ ಕಾರ್ಯಕ್ರಮಗಳು ದೇಶದ ಎಲ್ಲೆಡೆಗಳ ಜನತೆಯ ಮನಸನ್ನು ಸೆಳೆದಿವೆ. ದೇಶ ಬಲಿಷ್ಟವಾಗಬೇಕಾದರೆ ರಾಜ್ಯ ಸರಕಾರಗಳೂ ಬಲಿಷ್ಟವಾಗಬೇಕು" ಎಂದು ಮನನೀಯವಾಗಿ, ಜನತೆಗೆ ತಿಳಿಯಪಡಿಸಿದರು. ಕರ್ನಾಟಕ ಸರಕಾರವೂ ಒಂದು ವರ್ಷದ ನಂತರ ಇಂತಹ ಕಾರ್ಯಕ್ರಮವನ್ನು ದೇಶದ ಇತರ ಭಾಗಗಳಲ್ಲಿ ಏರ್ಪಡಿಸುವ ಬಗ್ಗೆ ಚಿಂತಿಸುವುದು" ಎಂದು ನುಡಿದರು.

ಪಶ್ಚಿಮ ಬಂಗಾಳದ ವಿದ್ಯಾಮಂತ್ರಿಗಳಾದ ಕಾ। ಕಾಂತಿ ಬಿಶ್ವಾಸರು "ರಾಜ್ಯದ ಆಯ-ವ್ಯಯದಲ್ಲಿ ನಾಲ್ಕನೇ ಒಂದಂಶ ಹಣವನ್ನು ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುತ್ತದೆ ಎಂದೂ, ಇದರಲ್ಲಿ ಶೇ 80ರಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದೆ ಎಂದು ತಿಳಿಸಿ ಕೇಂದ್ರ ಸರಕಾರವು ತನ್ನ ವರ್ಷದ ಆಯವ್ಯಯ ಪಟ್ಟಿಯ ರೂ. 35,000 ಕೋಟಿಯಲ್ಲಿ ಕೇವಲ ರೂ. 350 ಕೋಟಿಯನ್ನು ಮಾತ್ರ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿದೆ" ಎಂದು ಮನನ ಮಾಡಿದರು.

ವಾರ್ತಾ ಇಲಾಖಾ ಮಂತ್ರಿ ಕಾ। ಪ್ರಭಾಸ್ ಪೋಡಿಕರ್ ಅವರು 'ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಷ್ಟರ ನೇತೃತ್ವದ ಎಡರಂಗ ಸರಕಾರವು ಕಳೆದ 6 ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನ ವಿಭಾಗಗಳಿಗೆ ಭೂ ಸುಧಾರಣೆ ಕಾನೂನು ಜ್ಯಾರಿ ಮಾಡುವುದರ ಮೂಲಕ ಮತ್ತು ಗ್ರಾಮ ಪಂಚಾಯಿತಿಯ ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತುಗಳ ಮೂಲಕ ಅಧಿಕಾರ ವಿಕೇಂದ್ರಿಕರಣಕ್ಕೆ ಚಾಲ್ತಿ ಕೊಟ್ಟು (ಜನತೆ) ಜೀವನ ನಡೆಸಲು ಅನುಕೂಲ ವಾತಾವರಣವನ್ನು ಏರ್ಪಡಿಸಲಾಗಿದೆ ಎಂದು ವಿವರಿಸಿ ಹೇಳಿದರು. "ಕೇಂದ್ರ ಸರಕಾರದ ಮೂಲ ನೀತಿ ಬದಲಾದರೆ ಮಾತ್ರ ನಿರುದ್ಯೋಗದಂತಹ ಬೃಹತ್ ಸಮಸ್ಯೆ ಬಗೆ ಹರಿಸಬಹುದು" ಎಂದು ತಿಳಿಸಿದರು.

ಕ್ರಾಂತಿಕಾರಿ ಚಲನ ಚಿತ್ರ ಪ್ರದರ್ಶನಗಳೂ, ಎಡರಂಗದ ಸರಕಾರದ ಕಾರ್ಯಕ್ರಮವನ್ನು ವಿವರಿಸುವ ಪ್ರದರ್ಶನಗಳೂ ಸಾವಿರಾರು ಸಾರ್ವಜನಿಕರ ಮನಸ್ಸನ್ನು ಸೂರೆ ಮಾಡಿವೆ.

ಇಂತಹ ಕಾರ್ಯಕ್ರಮವು ರಾಜ್ಯದ ಎಲ್ಲಾ ಸ್ಥಳಗಳಲ್ಲಿ ನಡೆದರೆ ಮಾತ್ರ 35 ವರ್ಷಗಳ ಕಾಂಗ್ರೆಸ್ಸು ಸರಕಾರವನ್ನು ಅಳೆಯಲು ಅವಶ್ಯಕವಾದ ಮಾನದಂಡ ಜನತೆಗೆ ದೊರೆಯುವುದು. "ಅತ್ಯಂತ ಕಡಿಮೆ ಅಧಿಕಾರ ಮತ್ತು ಸಂಪನ್ಮೂಲಗಳು ಇದ್ದಾಗ್ಯೂ, ಸರಿಯಾದ ಧೋರಣೆ ಇದ್ದಲ್ಲಿ, ಜನಸಾಮಾನ್ಯರ ಬಗ್ಗೆ ಕಳಕಳಿ ಇದ್ದಲ್ಲಿ, ದೃಢ ರಾಜಕೀಯ ಸಂಕಲ್ಪವಿದ್ದಲ್ಲಿ, ಜನತೆಗೆ ಸ್ವಲ್ಪ ಮಟ್ಟಿನ ಅನುಕೂಲತೆ ಒದಗಿಸಿಕೊಡಬಹುದು ಎಂಬುದನ್ನು ಪಶ್ಚಿಮ ಬಂಗಾಳದ ಎಡರಂಗದ ಸರಕಾರದ ಈ ಕಾರ್ಯಕ್ರಮವು ಜನಜನಿತ ಗೊಳಿಸುತ್ತದೆ. ಅದೇ ವೇಳೆ ದೇಶದಲ್ಲಿ ಕ್ರಾಂತಿಕಾರಿ ಜಾಗೃತಿಯು ಬೆಳೆಯದೆ. ಕ್ರಾಂತಿಕಾರಿ ಅಧಿಕಾರವು ಏರ್ಪಡದೆ, ಮೂಲಭೂತ ಬದಲಾವಣೆ ಸಾಧ್ಯವಿಲ್ಲ. ಎಂಬುದೂ ಸೂಕ್ಷ್ಮವಾಗಿ ಈ ಕಾರ್ಯಕ್ರಮದಿಂದ ಸೂಚಿಸಲ್ಪಡುತ್ತದೆ.

ಏಜೆನ್ಸಿದಾರರ ಗಮನಕ್ಕೆ

'ಐಕ್ಯರಂಗ' ಹಣಕಾಸಿನ ತೊಂದರೆಯನ್ನೆದುರಿಸುತ್ತಿದೆ. ಪತ್ರಿಕೆಯ ಏಜೆನ್ಸಿದಾರರು ತಮ್ಮ ಬಿಲ್‌ನ ಹಣವನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ. ಅನೇಕ ಏಜೆನ್ಸಿದಾರರು ಹಲವಾರು ತಿಂಗಳುಗಳ ಬಿಲ್ಲಿನ ಹಣವನ್ನು ಪಾವತಿ ಮಾಡಿಲ್ಲ. ಅಂಥವರು ಕೂಡಲೇ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕ
ಐಕ್ಯರಂಗ

ದಶಲಕ್ಷ ಸಹಿ ಸಂಗ್ರಹ ಚಳುವಳಿ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.), ಕರ್ನಾಟಕ ರಾಜ್ಯ ಸಮಿತಿಯು ಡೊನೇಷನ್-ಕ್ಯಾಪಿಟೇಶನ್ ಶುಲ್ಕ ರದ್ದತಿಗೆ ಒತ್ತಾಯಿಸಿ ರಾಜ್ಯದಾದ್ಯಂತ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ದಶಲಕ್ಷ ಸಹಿ ಸಂಗ್ರಹ ಚಳುವಳಿ ಪ್ರಾರಂಭಿಸಿದೆ. ಸಹಿ ಸಂಗ್ರಹವನ್ನೊಳಗೊಂಡ ಮನವಿಯನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸುವ ದಿನಾಂಕವನ್ನು ಕೆಲವೊಂದು ಕಾರಣಗಳಿಂದ ನವೆಂಬರ್ 14ಕ್ಕೆ ಮುಂದೂಡಲಾಗಿದೆ, ಎಂದು ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ.

ಸೆಪ್ಟಂಬರ್ ೧೫ ರ ಕಾರ್ಯಕ್ರಮದ ಯಶಸ್ವಿಗೆ ಕರೆ

1981ರ ಸೆಪ್ಟಂಬರ್ 15ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ನೇತೃತ್ವದಲ್ಲಿ ಹನ್ನೆರಡು ವಿದ್ಯಾರ್ಥಿಯುವಜನ ಸಂಘಟನೆಗಳ ಕ್ರಿಯಾಸಮಿತಿಯು ನವದೆಹಲಿಯಲ್ಲಿ ನಡೆಸಿದ ಬೃಹತ್ ವಿದ್ಯಾರ್ಥಿ - ಯುವಜನರ ಮತ ಪ್ರದರ್ಶನದ ಚಾರಿತ್ರಿಕ ಕಾರ್ಯಕ್ರಮದ ಎರಡನೇ ವಾರ್ಷಿಕೋತ್ಸವವನ್ನು ಇದೀಗ ಆಚರಿಸಲಾಗುತ್ತದೆ.

ದೇಶದಲ್ಲಿ ಪ್ರತ್ಯೇಕತಾವಾದಿ ಮತ್ತು ಪ್ರತಿಗಾಮಿಗಳು ವಿದ್ಯಾರ್ಥಿ-ಯುವಜನರನ್ನು ತಪ್ಪುದಾರಿಗೆಳೆಯುತ್ತಿರುವ ಹಿನ್ನಲೆಯಲ್ಲಿ ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗದ ಘೋಷಣೆಯು ಬಹಳ ಮಹತ್ವಪೂರ್ಣವಾದುದಾಗಿದೆ. ಆದ್ದರಿಂದ 1983ರ ಸೆಪ್ಟಂಬರ್ 15ರಂದು ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಿ ಈ ಚಾರಿತ್ರಿಕ ಚಳುವಳಿಯನ್ನು ಮುಂದೆ ಕೊಂಡೊಯ್ಯಬೇಕೆಂದು ಎಸ್. ಎಫ್. ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮತ್ತು ಡಿ. ವೈ. ಎಫ್. ಐ. ರಾಜ್ಯ ಸಂಚಾಲಕ ಎಸ್. ಶಿವರಾಂರವರು ಜಂಟಿ ಹೇಳಿಕೆಯೊಂದರಲ್ಲಿ ಎಲ್ಲಾ ಶಾಖೆಗಳಿಗೆ ಕರೆ ನೀಡಿದ್ದಾರೆ.

ಸೆಪ್ಟಂಬರ್ 15ರಿಂದ ತಾಲ್ಲೋಕು ಪ್ರದೇಶಗಳಿಂದ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಸೈಕಲ್ ಜಾತಾ ಕೊಂಡೊಯ್ದು ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ ಮೂಲಕ ವಿದ್ಯಾರ್ಥಿ - ಯುವಜನರ ಬೇಡಿಕೆಗಳ ಮನವಿ ಸಲ್ಲಿಸಲಾಗುವುದು.

1983ರ ಸೆಪ್ಟಂಬರ್ 15ರ ಈ ದಿನಾಚರಣೆಯಂದು ರಾಜ್ಯದ ವಿದ್ಯಾರ್ಥಿ ಯುವಜನ ಸಮುದಾಯದ ಪ್ರಮುಖ ಬೇಡಿಕೆಗಳಾಗಿರುವ 'ಡೊನೇಷನ್-ಕ್ಯಾಪಿಟೇಶನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಬೇಕು', ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೂಡಲೇ ಪ್ರಾರಂಭಿಸಬೇಕು', 'ಸರ್ವರಿಗೂ ಶಿಕ್ಷಣ: ಸರ್ವರಿಗೂ ಉದ್ಯೋಗದ' ಘೋಷಣೆಗಳನ್ನು ಎತ್ತಿ ಹಿಡಿಯಲು ಕರೆ ನೀಡಲಾಗಿದೆ.

ಹತ್ತಿ ಗಿರಣಿ ಕಾರ್ಮಿಕರಿಂದ ಧರಣಿ

ತಾ. 14-7-83ರಂದು ಕರ್ನಾಟಕ ರಾಜ್ಯ ಹತ್ತಿ ಗಿರಣಿ ಕಾರ್ಮಿಕರು ಮತ್ತು ಕಾರ್ಮಿಕ ಸಚಿವರ ಮುಂದೆ ಆದ ಒಪ್ಪಂದದ ಪ್ರಕಾರ ಮಾಲೀಕರು ತಾತ್ಕಾಲಿಕ ಪರಿಹಾರವಾಗಿ ತಿಂಗಳಿಗೆ 26-00 ರೂ. ಕೊಡುವುದನ್ನು ಎನ್ ಟಿ, ಸಿ. ಯವರು ತಿರಸ್ಕರಿಸಿರುವುದರ ವಿರುದ್ಧ ಸಂಘದ ಸದಸ್ಯರುಗಳು ದಿನಾಂಕ 12-3-83ರಿಂದ ನಗರದ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ ಎನ್. ಟಿ. ಸಿ. ಕಛೇರಿ ಮುಂದೆ ಬೆಳಿಗ್ಗೆ 10-00 ಘಂಟೆಗೆ ಧರಣಿ ಸತ್ಯಾಗ್ರಹ ಪ್ರಾರಂಭ ಮಾಡಲು ತೀರ್ಮಾನಿಸಿರುವುದಾಗಿ ಪ್ರಕಟನೆ ತಿಳಿಸಿದೆ.

ಕಾಂಗ್ರೆಸ್ಸಿನೊಳಗೆ ಬಂಡಾಯ

(1ನೇ ಪುಟದಿಂದ)

ಕಪಾಳಮೋಕ್ಷವಾದಂತಾಗಿದೆ. ಆಂಧ್ರದ ಮಾಜಿ ಮುಖ್ಯ ಮಂತ್ರಿ ಚೆನ್ನಾರೆಡ್ಡಿಯವರು ಪುನರ್ರಚಿತ ರಾಜ್ಯ ಸಮಿತಿಯಲ್ಲಿ ಸದಸ್ಯರಾಗುಳಿಯಲು ನಿರಾಕರಿಸಿ, ದಿಲ್ಲಿಯಿಂದ ಒತ್ತಡ ಬಂದರೂ ಕೂಡ ಸಭೆಗೆ ಹಾಜರಾಗಲಿಲ್ಲ. ರಾಜ್ಯ ಸಮಿತಿಗೆ ಅಧ್ಯಕ್ಷರನ್ನೂ, ಸದಸ್ಯರನ್ನೂ ದಿಲ್ಲಿಯಿಂದ ಹೇರುವ ನೀತಿಯನ್ನು ಪ್ರತಿಭಟಿಸಿದ್ದಾರೆ.

ಇದರಂತೆಯೇ ದಿಲ್ಲಿಯಿಂದ ಹೇರಲ್ಪಟ್ಟ ಪುನರ್ರಚಿತ ಕೇರಳ ರಾಜ್ಯ ಸಮಿತಿಯ ಸಭೆಗೆ ಅರ್ಧದಷ್ಟು ಸದಸ್ಯರು ಹಾಜರಾಗಲಿಲ್ಲ. ನಯನಾರ್ ಸರಕಾರವನ್ನುರುಳಿಸುವುದರಲ್ಲಿ ಪ್ರಧಾನ ಪಾತ್ರಧಾರಿ ಎ. ಕೆ. ಅಂತೋನಿಯನ್ನು ಅಧ್ಯಕ್ಷರನ್ನಾಗಿ ಮಾಡದಿರುವುದೇ ಇದಕ್ಕೆ ಕಾರಣ.

ಮಹಾರಾಷ್ಟ್ರದ ದಾದಾ ದಿಲ್ಲಿ ತೀರ್ಮಾನವನ್ನು ವಿರೋಧಿಸಿದ್ದಷ್ಟೇ ಅಲ್ಲ ದಿಲ್ಲಿಯಿಂದ ನೇಮಿಸಲ್ಪಟ್ಟವರನ್ನು ಕಿತ್ತೊಗೆದು ತನ್ನವರನ್ನೇ ನೇಮಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ರಾಜಸ್ಥಾನ ಮತ್ತಿನ್ನಿತರ ರಾಜ್ಯಗಳೆಲ್ಲೂ ಇದೇ ರೀತಿ ನಡೆದಿದೆ, ಪರಿಣಾಮ ಕಾದು ನೋಡಬೇಕು. 69-70ರಲ್ಲೂ ದಿಲ್ಲಿ ಫರ್ಮಾನ್ ನಾಟಲಿಲ್ಲ. ಅದರ ಪರಿಣಾಮವಾಗಿ 72ರಲ್ಲಿ ಹಲವಾರು ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರಕಾರ ಅಸ್ತಿತ್ವದಲ್ಲಿ ಬಂದಿದ್ದವು. 74-75ರಲ್ಲೂ ಇಂಥದ್ದೇ ಅನುಭವ. ಅದರ ಪರಿಣಾಮವಾಗಿ "ತುರ್ತು" ಪರಿಸ್ಥಿತಿ ಜಾರಿಯಲ್ಲಿ ಬಂದಿತ್ತು. ಈಗ 83ರಲ್ಲಿ ದಕ್ಷಿಣ ಭಾರತದ ಜನತೆ ಇಂದಿರಾಗೆ ಕೈಕೊಟ್ಟಿರುವುದನ್ನು ಕಂಡ ಉತ್ತರದ ಕಾಂಗ್ರೆ ಮುಖಂಡರಲ್ಲೂ "ಏಕವ್ಯಕ್ತಿ" ನಿರ್ಣಯಗಳನ್ನು ವಿರೋಧಿಸುವ ಧೈರ್ಯ ಮೂಡಿಬಂದಂತೆ ಕಂಡುಬರುತ್ತಿದೆ. ಇಂದಿರಾ ಕಾಂಗ್ರೆಸ್ಸಿನಲ್ಲಿ ಬೆಳೆಯುತ್ತಿರುವ ಹೊಸ ಬೆಳವಣಿಗೆ ಇದಾಗಿದೆ. ಇಂದಿರಾ ಭದ್ರ ಕೋಟೆ ಕುಸಿಯುತ್ತಿರುವ ಲಕ್ಷಣ ಇದಾಗಬಹುದು. ಇದನ್ನು ಸ್ವಾಗತಿಸೋಣ.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO